ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 133 RNI Number : KNKAN/25/A2770 22-05-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :133 ರಾಯಚೂರು 22-05-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563


ತಿರುಪತಿಯಲ್ಲಿ ವಿಕಾವಿಕೆ ಹೆಚ್ಚಿದ ಜನದಟ್ಟಣೆ, ವಿಲ್ಲಾ ಕಡೆ ಉದ್ದುದ್ದ ಸಾಲು!

ತಿರುಮಲ (ಆಂಧ್ರ ಪ್ರದೇಶ): ಬೇಸಿಗೆ ರಜೆ ಅಂತ್ಯಕ್ಕೆ ಇನ್ನೇನು ವಾರವಷ್ಟೇ ಬಾಕಿ ಉಳಿದಿದೆ. ಈ ನಡುವೆ ತಿರುಮಲದಲ್ಲಿ ಭಕ್ತರ ಸಂಖ್ಯೆಯಲ್ಲಿ ಅನಿರೀಕ್ಷಿತ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದೆ. ವಿಕಾವಿಕೆ ಭಕ್ತರ ಸಂಖ್ಯೆಯಲ್ಲಿ ಬಾರಿ ಏರಿಕೆ ಕಂಡು ಬಂದಿರುವುದರಿಂದ ದೇವರ ದರ್ಶನದ ಸಾಲಿನಿಂದ ಹಿಡಿದ ಎಲ್ಲಾ ಸೌಕರ್ಯಗಳಲ್ಲೂ ಜನದಟ್ಟಣೆ ಮತ್ತು ಉದ್ದುದ್ದದ ಸಾಲುಗಳು ಕಂಡು ಬಂದಿದೆ.

ತಿರುಮಲ ತಿರುಪತಿ ದೇವಸ್ಥಾನಂ ಅಧಿಕಾರಿಗಳ ಪ್ರಕಾರ, ವೈಕುಂಟಂ ಕಂಪಾರ್ಟಮೆಂಟ್ 1 ಮತ್ತು 2ನೇ ಸಂಕೀರ್ಣಗಳಲ್ಲಿ ಎಲ್ಲ ಸೀಟುಗಳು ಭರ್ತಿಯಾಗಿವೆ. ಭಕ್ತರ ಹರಿವು ಹೆಚ್ಚಾಗಿದ್ದ ಪರಿಣಾಮವಾಗಿ ಹೆಚ್ಚುವರಿಯಾಗಿ ನಾರಾಯಣಗಿರಿ ಗಾರ್ಡನ್‌ನಲ್ಲಿ ತಾತ್ಕಾಲಿಕವಾಗಿ ಶೆಡ್ ವ್ಯವಸ್ಥೆ ಮಾಡಲಾಗಿದೆ. ಈ ಭಕ್ತರ ಸಾಲು ಬಟ ಗಂಗಮ್ಮ ದೇವಸ್ಥಾನದ ಪ್ರದೇಶದವರೆಗೂ ವಿಸ್ತರಣೆ ಕಂಡಿದ್ದು, ಇದು ತಿರುಮಲಗಿರಿಯಲ್ಲಿನ ಜನದಟ್ಟಣೆಯನ್ನು ಬಿಂಬಿಸುತ್ತಿದೆ.

ಭಾರೀ ಜನದಟ್ಟಣೆ ಹಿನ್ನೆಲೆಯಲ್ಲಿ ಶ್ರೀವೆಂಕಟೇಶ್ವರ ಸ್ವಾಮಿ ಸರ್ವ ದರ್ಶನಕ್ಕೆ ಸುಮಾರು 24 ಗಂಟೆ ಅಂದರೆ, ಒಂದು ದಿನವೀಡಿ ಕಾದು ಕುಳಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಜನರು ಸಾಲುಗಟ್ಟಿ ನಿಂತಿರುವ ಹಿನ್ನೆಲೆಯಲ್ಲಿ ಶುಕ್ರವಾರ ಮುಂಜಾನೆ 6ರವರೆಗೆ, ಕ್ಯೂನಲ್ಲಿ ನಿಲ್ಲುವುದಕ್ಕೆ ಅನುಮತಿ ನಿರಾಕರಿಸುವಂತೆ ಟಿಟಿಡಿ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ದಟ್ಟಣೆ ಕೊಂಚ ಕಡಿಮೆಯಾಗುವವರೆಗೂ ದರ್ಶನಕ್ಕೆ ಬರುವವರನ್ನು, ಯಾತ್ರಿಕರ ಸೌಕರ್ಯಗಳ ಸಂಕೀರ್ಣ (ಪಿಎಸಿ)ಗೆ ಹಿಂದಿರುಗುವಂತೆ ಕೋರಲಾಗಿದೆ.


ಕೇಂದ್ರ ಸ್ವಾಗತ ಕಚೇರಿ (ಸಿಆರ್‌ಒ) ಬಳಿ ಕೂಡ ಭಾರಿ ಜನ ದಟ್ಟಣೆ ಇದೆ. ದೇವರ ದರ್ಶನಕ್ಕೆ ಆಗಮಿಸಿರುವ ಭಕ್ತರು ತಮ್ಮ ವಸತಿ ವ್ಯವಸ್ಥೆ ಪಡೆಯಲು ಇಲ್ಲಿ ದೀರ್ಘ ಸಾಲಿನಲ್ಲಿ ಕಾದು ನಿಲ್ಲಬೇಕಾದ ಪರಿಸ್ಥಿತಿ ಇದೆ. ಇದೇ ರೀತಿ ದೇವರಿಗೆ ಮುಡಿ (ತಲೆ ಕೂದಲು) ಅರ್ಪಿಸುವ ಕಲ್ಯಾಣಕಟ್ಟ ಕ್ಷೌರ ಕೇಂದ್ರದ ಬಳಿಯು ನೂರಾರು ಭಕ್ತರು ಸರತಿ ಸಾಲಿನಲ್ಲಿ ನಿಂತಿರುವುದು



ಕಂಡು ಬಂದಿದೆ.

ಭಕ್ತರ ಸಂಖ್ಯೆ ಹೆಚ್ಚಿರುವ ಹಿನ್ನೆಲೆಯಲ್ಲಿ ದಟ್ಟಣೆ ನಿರ್ವಹಣೆಗೆ ನಿರಂತವಾಗಿ ಅಧಿಕಾರಿಗಳು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಸಾಲಿನಲ್ಲಿ ನಿಂತಿರುವ ಭಕ್ತರಿಗೆ ಕುಡಿಯಲು ನೀರು ಮತ್ತು ಆಹಾರ ಸೇರಿದಂತೆ ಅಗತ್ಯ ಸೌಲಭ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಸದ್ಯದ ದಟ್ಟಣೆ ಹಿನ್ನೆಲೆ ಮುಂದಿನ ಎರಡು ದಿನಗಳಲ್ಲಿ ಯಾರಾದರೂ ತಿರುಮಲಕ್ಕೆ ಪ್ರಯಾಣ ಬೆಳೆಸುವ ಉದ್ದೇಶ ಹೊಂದಿದ್ದರೆ, ಭಕ್ತರು ತಮ್ಮ ಪ್ರಯಾಣದ ಯೋಜನೆಯನ್ನು ಮರುಪರಿಶೀಲಿಸುವುದು ಒಳ್ಳೆಯದು. ದಟ್ಟಣೆ ಕಡಿಮೆಯಾದ ಬಳಿಕ ತಿರುಮಲಕ್ಕೆ ಭೇಟಿ ನೀಡಲು ಯೋಜಿಸಬಹುದು ಎಂದು ಸಲಹೆ ನೀಡಲಾಗಿದೆ.

ಕಾಡ್ಲೂರಿಗೆ ಪೇಜಾವರ ಶ್ರೀಗಳ ದಿಗ್ವಿಜಯ ಭಕ್ತಿ ಸಂಭ್ರಮದಲ್ಲಿ ಗ್ರಾಮಸ್ಥರಿಂದ ಪೂರ್ಣಕುಂಭ ಸ್ವಾಗತ



ರಾಯಚೂರು, ಮೇ.21-

ತಾಲೂಕಿನ ಕಾಡ್ಲೂರು ಗ್ರಾಮಕ್ಕೆ ಉಡುಪಿ ಪೇಜಾವರ ಮಠಾಧೀಶರಾದ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಬುಧವಾರ ದಿಗ್ವಿಜಯಗೈದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಭಕ್ತಿ ಸಂಭ್ರಮ ಮನೆಮಾಡಿತ್ತು.

ಗ್ರಾಮಕ್ಕೆ ಆಗಮಿಸಿದ ಶ್ರೀಗಳನ್ನು ಗ್ರಾಮಸ್ಥರು, ವಿಪ್ರ ಬಾಂಧವರು ವಾದ್ಯ ವೈಭವ, ಬಾಣ ಬಿರುಸು ಹಾಗೂ ಪೂರ್ಣಕುಂಭದೊಂದಿಗೆ ಭವ್ಯವಾಗಿ ಸ್ವಾಗತಿಸಿದರು. ಅನೇಕ ಭಕ್ತರು ತಮ್ಮ ಮನೆಗಳಲ್ಲಿ ಶ್ರೀಗಳ ಪಾದಪೂಜೆ ನೆರವೇರಿಸಿ ಆಶೀರ್ವಾದ ಪಡೆದರು.

ನಂತರ ಗ್ರಾಮದ ಪುರಾತನ ಹಾಗೂ ವಿಶಿಷ್ಟ ವಾಸ್ತುಶಿಲ್ಪ ಹೊಂದಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಸಂಸ್ಥಾನ ಪೂಜೆ ನೆರವೇರಿಸಲಾಯಿತು. ಪೂಜೆಯ ಬಳಿಕ ಭಕ್ತಾದಿಗಳಿಗೆ ಫಲಮಂತ್ರಾಕ್ಷತೆ ವಿತರಿಸಲಾಯಿತು.

ಕಲ್ಯಾಣಿ ವಾಸುದೇವಾಚಾರ್ಯ ಕುಟುಂಬಸ್ಥರು ಭಕ್ತಾದಿಗಳಿಗೆ ತೀರ್ಥಪ್ರಸಾದ ಸೇರಿದಂತೆ ಸಕಲ ವ್ಯವಸ್ಥೆ ಕಲ್ಪಿಸಿದ್ದರು. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು.

ಕೃಷ್ಣಾನದಿ ತೀರದಲ್ಲಿ ಮಂಗಳಾರತಿ

ಸಂಜೆ ವೇಳೆ ಶ್ರೀಗಳು ಗ್ರಾಮದ ಕೃಷ್ಣಾನದಿ ತೀರದಲ್ಲಿರುವ ಶ್ರೀವನವಾಸಿ ರಾಮದೇವರ ಸನ್ನಿಧಾನ ಹಾಗೂ ಶ್ರೀ ಉಪೇಂದ್ರ ತೀರ್ಥ ಕರಾರ್ಚಿತ ಮುಖ್ಯ ಪ್ರಾಣ ದೇವರ ಸನ್ನಿಧಾನಗಳಿಗೆ ಭೇಟಿ ನೀಡಿ ಮಂಗಳಾರತಿ ನೆರವೇರಿಸಿದರು. ಬಳಿಕ ನದಿ ತೀರದಲ್ಲಿ ಕೆಲ ಹೊತ್ತು ವಿಹರಿಸಿದ ಶ್ರೀಪಾದಂಗಳವರಿಗೆ ಕಾಡ್ಲೂರು ಸಂಸ್ಥಾನದ ವತಿಯಿಂದ ಭಕ್ತಿಪೂರ್ವಕ ಗೌರವ ಸಮರ್ಪಿಸಲಾಯಿತು.

ನವೋದಯ ಸಂಸ್ಥೆಯಿಂದ ಸಂಚಾರಿ ಪೊಲೀಸರಿಗೆ 50 ಬ್ಯಾರಿಕೇಡ್‌ಗಳ ಕೊಡುಗೆ





ರಾಯಚೂರು, ಮೇ.21-

ನಗರದ ನವೋದಯ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯ ನಗರ ಸಂಚಾರ ಪೊಲೀಸ್ ಠಾಣೆ ವತಿಯಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜಯಂತಿ ಅಂಗವಾಗಿ ಸಂಚಾರ ನಿಯಮ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಇದೇ ವೇಳೆ ನವೋದಯ ಶಿಕ್ಷಣ ಮತ್ತು ಆಸ್ಪತ್ರೆ ಸಂಸ್ಥೆಯಿಂದ ಸಂಚಾರಿ ಪೊಲೀಸ್ ಠಾಣೆಗೆ 50 ಬ್ಯಾರಿಕೇಡ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ನವೋದಯ ಸಂಸ್ಥೆಯ ಇಂಚಾರ್ಜ್ ಟಿ. ಶ್ರೀನಿವಾಸ್ ಸ್ವಾಗತ ಕೋರಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಗುಶ್ ಗಿರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ. ಕುಮಾರಸ್ವಾಮಿ, ಡಿವೈಎಸ್ಪಿ ಶಾಂತವೀರ, ಡಾ. ಪ್ರಶಾಂತ್ ಗುರುದತ್ತ, ಡಾ. ರಮೇಶ್ ಬಾಬು ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನವೋದಯ ಸಂಸ್ಥೆಯ ಪ್ರತಿನಿಧಿಗಳು, ''ನಮ್ಮ ಸಂಸ್ಥೆ ಸಾರ್ವಜನಿಕ ಸೇವೆಗೆ ಬದ್ಧವಾಗಿದ್ದು, ಆರೋಗ್ಯ ಸೇವೆಯ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳಿಗೂ ಆದ್ಯತೆ ನೀಡುತ್ತಿದೆ'' ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಗುಶ್ ಗಿರಿ, ಸಂಚಾರ ನಿಯಮಗಳ ಪಾಲನೆ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ ಎಂದು ಹೇಳಿದರು. ರಸ್ತೆ ಅಪಘಾತಗಳನ್ನು ತಡೆಯಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು. ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದ್ದು, ವೈದ್ಯರು ಹಾಗೂ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯೂ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕರೆ ನೀಡಿದರು.

ನವೋದಯ ಆಸ್ಪತ್ರೆ ಸಂಸ್ಥೆ ಸಂಚಾರಿ ಪೊಲೀಸ್ ಠಾಣೆಗೆ 50 ಬ್ಯಾರಿಕೇಡ್‌ಗಳನ್ನು ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ

3 ನೇ ಪುಟಕ್ಕೆ

ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನ ಆಚರಣೆ



ರಾಯಚೂರು ಮೇ.21-

ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಮೇ.21ರ ಗುರುವಾರ ದಂದು ರಾಯಚೂರು ನಗರದ ಜಿಲ್ಲಾ ಪಂಚಾಯತಿ ಕಚೇರಿಯ ಆವರಣದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರ ನೇತೃತ್ವದಲ್ಲಿ ಪ್ರತಿಜ್ಞಾ ವಿಧಿಯನ್ನು ಬೋಧಿಸುವ ಮೂಲಕ ಆಚರಣೆ ಮಾಡಲಾಯಿತು.

ಪ್ರತಿ ವರ್ಷ ಮೇ 21ನೇ ದಿನಾಂಕದಂದು ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಅದರಂತೆ ಈ ವರ್ಷವೂ ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲು ಉದ್ದೇಶಿಸಲಾಗಿದೆ ಎಂದರು.

ಭಯೋತ್ಪಾದನೆ ಮಟ್ಟಹಾಕಲು ಎಲ್ಲರ ಸಹಕಾರ ಅಗತ್ಯ. ಸ್ವಾರ್ಥ ಬಿಟ್ಟು ರಾಜ್ಯ ಹಾಗೂ ದೇಶದ ಹಿತ ದೃಷ್ಟಿಯಿಂದ ಭಯೋತ್ಪಾದನೆ ವಿರುದ್ಧ ಎಚ್ಚೆತ್ತುಕೊಳ್ಳಬೇಕಿದೆ ಎಂದರು.

ಭಯೋತ್ಪಾದನಾ ಕೃತ್ಯಗಳ ವಿರುದ್ಧ ಜಾಗೃತರಾಗದಿದ್ದಲ್ಲಿ ಸಮಾಜಘಾತಕ ಶಕ್ತಿಗಳು ಹಾಗೂ ಭಯೋತ್ಪಾದಕರು ಅಮಾನುಷ

3 ನೇ ಪುಟಕ್ಕೆ

ದೇವದುರ್ಗ: ಅಕ್ರಮ ಮುರಂ ಗಣಿಗಾರಿಕೆ ತಡೆಗೆ ಆಗ್ರಹಿಸಿ ತಹಶೀಲ್ದಾರರಿಗೆ ಮನವಿ

ದೇವದುರ್ಗ: ತಾಲ್ಲೂಕಿನ ಕೋಳೂರು ಗ್ರಾಮದ ಸರ್ಕಾರಿ ಜಾಗದಲ್ಲಿ ನಡೆಯುತ್ತಿರುವ ಅಕ್ರಮ ಭೂ-ಗಣಿಗಾರಿಕೆಯನ್ನು ತಡೆದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದ ತಾಲ್ಲೂಕು ಸಮಿತಿ ವತಿಯಿಂದ ಗುರುವಾರ ಮಾನ್ಯ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.



ಕೋಳೂರು ಗ್ರಾಮದ ಸರ್ವೆ ನಂ: 102 ರ ಸರ್ಕಾರಿ ಗೈರಾಣಿ ಭೂಮಿಯಲ್ಲಿ ಭೂಗಳ್ಳರು ಜೆ.ಸಿ.ಬಿ ಮೂಲಕ ಸುಮಾರು 100 ರಿಂದ 200 ಅಡಿ ಆಳದವರೆಗೆ ಮಣ್ಣು ಅಗೆದು, ಟ್ರ್ಯಾಕ್ಟರ್‌ಗಳ ಮೂಲಕ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಗ್ರಾಮದಲ್ಲಿ ವಿಪರೀತ ಧೂಳು ಎದ್ದು ಸಾರ್ವಜನಿಕರ ಆರೋಗ್ಯ ಹದಗೆಡುತ್ತಿದೆ. ಇದನ್ನು ಪ್ರಶ್ನಿಸಿದರೆ ಆರೋಪಿ ಕೃಷ್ಣಪ್ಪ ಕೋಳೂರು ಹಾಗೂ ಆತನ ಸಹಚರರು ಜನರಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಒಕ್ಕೂಟದ ಪದಾಧಿಕಾರಿಗಳು ದೂರಿದ್ದಾರೆ.

ಅಕ್ರಮ ಗಣಿಗಾರಿಕೆಗೆ ಬಳಸಿರುವ ಟ್ರ್ಯಾಕ್ಟರ್ (

3 ನೇ ಪುಟಕ್ಕೆ

ಕವಿತಾಳ : ಜಗತ್ತಿನ ಕಲ್ಯಾಣಕ್ಕಾಗಿ ವಿಶೇಷ ಪೂಜೆ



ಕವಿತಾಳ: ಅಧಿಕ ಮಾಸದ ಅಂಗವಾಗಿ ಗುರುವಾರ ಪಟ್ಟಣದ ಲಕ್ಷ್ಮಿ ನಾರಾಯಣ, ಬಸವಣ್ಣ ಹಾಗೂ ಆಂಜನೇಯ ಸ್ವಾಮಿ ನೆಲೆಸಿರುವ ತ್ರಿಮೂರ್ತಿ ದೇವಸ್ಥಾನದಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ವಿಶೇಷ ಪೂಜಾ ಜರಗಿತು.

ಒಂದೇ ದೇವಸ್ಥಾನದಲ್ಲಿ ನೆಲೆಸಿರುವ ಲಕ್ಷ್ಮಿ ನಾರಾಯಣ, ಬಸವಣ್ಣ ಮತ್ತು ಆಂಜನೇಯ ದೇವರಿಗೆ ಬೆಳಿಗ್ಗೆಯಿಂದ ರುದ್ರಭಿಷೇಕ, ಪಂಚಾಮೃತಾಭಿಷೇಕ, ಸಹಸ್ರ ಬಿಲ್ವಾರ್ಚನೆ, ವಿಶೇಷ ಅಲಂಕಾರ, ಮಹಾಮಂಗಳಾರತಿ ಸೇರಿದಂತೆ 33 ಸಾಮೂಹಿಕ ದಂಪತಿಗಳಿಂದ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನೇರವೆರಿತು.

ಅರ್ಚಕರಾದ ವಿರೇಶ ಹೂಗಾರ, ಮಂಜುನಾಥ ಜೋಶಿ ಹಾಗೂ ಗೋವಿಂದ ಆಚಾರಿ ಜೋಶಿ ಅವರು ಪೂಜಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಮಹಿಳೆಯರು ಮಕ್ಕಳು, ಭಕ್ತರು ಭಾಗವಹಿಸಿದ್ದರು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು




ಪೊಲೀಸ್ ಇಲಾಖೆಯಿಂದ ರಾಷ್ಟ್ರೀಯ ಏಕತಾ ಓಟ

ಮುದಗಲ್ : ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನ ಹಾಗೂ ರಾಷ್ಟ್ರೀಯ ಐಕ್ಯತಾ ದಿನಾಚರಣೆಯ ಅಂಗವಾಗಿ ಬುಧುವಾರ ಪಟ್ಟಣದ ಪೊಲೀಸ್ ಠಾಣೆವತಿಯಿಂದ ರಾಷ್ಟ್ರೀಯ ಏಕತಾ ಓಟ ಕಾರ್ಯಕ್ರಮ ಜರುಗಿತು.

ಆಟೋ ನಿಲ್ದಾಣದಲ್ಲಿ ಪಿಎಸ್‌ಐ ವೆಂಕಟೇಶ ಮಾಡಗೇರಿ ಮಾತನಾಡಿ ದೇಶದ ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಮತ್ತು ದೇಶದ ಏಕತೆ, ಸಮಗ್ರತೆಯ ಸಂದೇಶವನ್ನು ಸಾರಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರೆಲ್ಲರೂ ಕಾನೂನು ನಿಯಮಗಳನ್ನು ಪಾಲಿಸಬೇಕು. ಪ್ರತಿಯೊಬ್ಬರೂ ಕಾನೂನಿಗೆ ಗೌರವ ಕೊಟ್ಟು ನಡೆಯಬೇಕು.

3 ನೇ ಪುಟಕ್ಕೆ

ಚಾಗಬಾವಿ ಗ್ರಾ.ಪಂ:ನರೇಗಾ ಕೂಲಿಕಾರರಿಗೆ ಆರೋಗ್ಯ ತಪಾಸಣೆ ಶಿಬಿರ



ರಾಯಚೂರು: ನೀತಿ ಆಯೋಗದ ಮಹತ್ವಕಾಂಕ್ಷೀ ತಾಲ್ಲೂಕ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ವಿಷಯಕ್ಕೆ ಸಂಬಂಧಿಸಿದಂತೆ ನಿಗಧಿಪಡಿಸಿರುವ 7 ಸೂಚಾಂಕಗಳಲ್ಲಿ ಟಿಬಿಯನ್ನು ತಡೆಗಟ್ಟುವುಕೆಯೂ ಒಂದಾಗಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ 100 ದಿನದ ''ಟಿಬಿ ಮುಕ್ತ ಭಾರತ ಅಭಿಯಾನದ ಭಾಗವಾಗಿ ನರೇಗಾ ಕೂಲಿಕಾರರಿಗೆ ಕ್ಷಯರೋಗ ಪರಿಕ್ಷೆ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯ ಸಿರವಾರ ತಾಲೂಕಿನ ಚಾಗಬಾವಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಯಿತು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರಸಾದ್ ರವರು ಮಾತನಾಡಿ, ಜಿಲ್ಲೆಯಲ್ಲಿ ದಿನ ದಿಂದಕ್ಕೆ ಬಿಸಿಲಿನ ತಾಪಮಾನ ಹೆಚ್ಚುತ್ತಿರುವದರಿಂದ ಕೂಲಿಕಾರರು ಕೆಲಸದ ಜೊತೆಗೆ ಆರೋಗ್ಯ ರಕ್ಷಣೆಗೆ ಹೆಚ್ಚಿನ ಒತ್ತು ನೀಡಿ

3 ನೇ ಪುಟಕ್ಕೆ

ತುರ್ತು ಸಂದರ್ಭದಲ್ಲಿ ಸುರಕ್ಷಿತ ರಕ್ಷಣೆಗಾಗಿ ಕೈಗಾರಿಕೆಗಳಲ್ಲಿ ಅಣಕು ಪ್ರದರ್ಶನ ಅಗತ್ಯ




ಬಳ್ಳಾರಿ,ಮೇ 21-

ಕೈಗಾರಿಕೆಗಳು ಮತ್ತು ಕಾರ್ಖಾ ನೆಗಳಲ್ಲಿ ಅನಿರೀಕ್ಷಿತವಾಗಿ ಸಂಭವಿ ಸುವ ಬೆಂಕಿ ಅವಘಡಗಳನ್ನು ಎದು ರಿಸಲು, ಸಾರ್ವಜನಿಕ ಆಸ್ತಿ-ಪಾಸ್ತಿ ನಷ್ಟವನ್ನು ತಡೆಯಲು ಹಾಗೂ ತುರ್ತು ಸಂದರ್ಭಗಳಲ್ಲಿ ಸಾರ್ವಜ ನಿಕರನ್ನು ಮತ್ತು ಸಿಬ್ಬಂದಿಗಳನ್ನು ಸುರಕ್ಷಿತವಾಗಿ ರಕ್ಷಿಸಲು ವಿಪತ್ತು ನಿರ್ವಹಣಾ ಅಣಕು ಪ್ರದರ್ಶನ ಅಗತ್ಯ ಎಂದು ಬಳ್ಳಾರಿ ಡಿಎಆರ್ ನ ಡಿಎಸ್ಪಿ ಜಿ.ಎಂ. ತಿಪ್ಪೇಸ್ವಾಮಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಗೃಹರಕ್ಷಕ ದಳ, ಪೌರರಕ್ಷಣೆ ಮತ್ತು ಅಗ್ನಿಶಾ ಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರ ಸಹಯೋಗದಲ್ಲಿ ಬಳ್ಳಾರಿ ತಾಲ್ಲೂಕಿನ ಅಮರಾಪುರ ಗ್ರಾಮದ ಡಿ.ಎಂ ಗ್ಲೋಬಲ್ ಕ್ಲಾತಿಂಗ್ ಕಂಪನಿಯ ಆವರಣದಲ್ಲಿ ವಿಪತ್ತು ನಿರ್ವಹಣೆ ಕುರಿತು ಬುಧ ವಾರ ಹಮ್ಮಿಕೊಂಡಿದ್ದ ಅಣಕು ಪ್ರದರ್ಶನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಡಿಮೆ ಸಮಯದಲ್ಲಿ, ಕನಿಷ್ಠ ನಷ್ಟದೊಂದಿಗೆ ಜನರನ್ನು ರಕ್ಷಿಸು ವುದು ಅಣಕು ಪ್ರದರ್ಶನದ ಮುಖ್ಯ ಉದ್ದೇಶ. ಇಂತಹ ಸಂದರ್ಭದಲ್ಲಿ ತ್ವರಿತ ಕಾರ್ಯಾಚರಣೆ ಮತ್ತು ಇಲಾಖೆಗಳ ಸಮನ್ವಯತೆಯೂ ಅಗತ್ಯ ಎಂದರು.

ಯಾವುದೇ ತುರ್ತು ಸಂದರ್ಭ ಎದುರಾದಾಗ ಕಾರ್ಖಾನೆಯ ಭದ್ರತಾ ಸಿಬ್ಬಂದಿಯ ಪಾತ್ರ ಅತ್ಯಂತ ಪ್ರಮುಖವಾಗಿರುತ್ತದೆ. ಅಲಾರಂ ಮೊಳಗಿದ ತಕ್ಷಣ ರ್‍ಯಾಲಿ ಪೋಸ್ಟ್‌ನಲ್ಲಿ ಸಿಬ್ಬಂದಿಗಳು ಹೇಗೆ ಜಮಾಯಿಸಬೇಕು, ಕಾರ್ಖಾನೆಯ ಎಡಭಾಗ, ಬಲಭಾಗ, ಮುಂಭಾಗ ಹಾಗೂ ಮುಖ್ಯ ದ್ವಾರಗಳಲ್ಲಿ ಯಾ ರ್ಯಾರು ಕರ್ತವ್ಯ ನಿರ್ವಹಿಸಬೇಕು ಎಂಬ ಬಗ್ಗೆ ಚಾರ್ಟ್ ಸಿದ್ಧವಿರಬೇಕು ಎಂದು ವಿವರಿಸಿದರು.

ಗೃಹರಕ್ಷಕ ದಳದ ಜಿಲ್ಲಾ ಸಮಾದೇಷ್ಟರಾದ ವೈ.ಶೇಕ್ ಸಾಬ್ ಅವರು ಮಾತನಾಡಿ, ಇತ್ತೀಚಿನ ಜಾಗತಿಕ ವಿದ್ಯಮಾನಗಳಾದ ಉಕ್ರೇ ನ್, ಇರಾನ್ ಮತ್ತು ಇಸ್ರೇಲ್ ದೇಶಗಳಲ್ಲಿನ ಪರಿಸ್ಥಿತಿಗಳನ್ನು ಗಮನಿಸಿದಾಗ, ಅಗ್ನಿ ಸುರಕ್ಷತೆ ಮತ್ತು ವಿಪತ್ತು ನಿರ್ವಹಣಾ ಮೋಕ್ ಡ್ರಿಲ್‌ಗಳ ಮಹತ್ವ ಏನೆಂಬುದು ನಮಗೆ ಅರಿವಾಗುತ್ತದೆ. ಇದು ಕೇವಲ ಒಂದು ತಾಲೀಮು ಅಲ್ಲ, ದೇಶದ ರಕ್ಷಣೆ ಮತ್ತು ಭವಿಷ್ಯಕ್ಕೆ ಭದ್ರವಾದ ಅಡಿಪಾಯವಾಗಿದೆ ಎಂದು ಹೇಳಿದರು.

ಪ್ರಕೃತಿ ವಿಕೋಪಗಳಾದ ಭೂಕಂಪ, ನೆರೆಹಾವಳಿಗಳಂತಹ ನೈಸರ್ಗಿಕ ವಿಕೋಪಗಳು ಒಂದು ಕಡೆಯಾದರೆ, ಯುದ್ಧದಂತಹ ಮಾನವ ನಿರ್ಮಿತ ಆಪತ್ತುಗಳು ಎದುರಾದಾಗ ಇಂತಹ ಸಣ್ಣಪುಟ್ಟ ಮೋಕ್ ಡ್ರಿಲ್‌ಗಳು ನಮ್ಮ ಜೀವ ರಕ್ಷಣೆಗೆ ಧಾವಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪರಿಣಿತ ಪರಮೇಶ ಅವರು ಮಾತನಾಡಿ, ನಾಗರಿಕರ ಸುರಕ್ಷತೆ ಹಾಗೂ ಸನ್ನದ್ಧತೆಯನ್ನು ಪರಿಶೀಲಿಸಲು ವರ್ಷಕ್ಕೆ ಎರಡು ಬಾರಿ (ಏಪ್ರಿಲ್ ಹಾಗೂ ನವೆಂಬರ್‌ನಲ್ಲಿ) ಏರ್ ರೈಡ್ ಅಟ್ಯಾಕ್ (ವಾಯು ದಾಳಿ) ಮತ್ತು ಬ್ಲ್ಯಾಕ್ ಔಟ್ ಮೋಕ್ ಡ್ರಿಲ್‌ಗಳನ್ನು ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಅಣಕು ಪ್ರದರ್ಶನದಲ್ಲಿ ಗಾಯಗೊಂಡವರನ್ನು ತಕ್ಷಣ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಪ್ರಥಮ ಚಿಕಿತ್ಸೆ ನೀಡುವುದು, ಕಾನೂನು ಸುವ್ಯವಸ್ಥೆ ಕಾಪಾಡುವುದು ಮತ್ತು ಆರೋಗ್ಯ ದೃಷ್ಟಿಯಿಂದ ಕೈಗೊಳ್ಳಬೇ ಕಾದ ತುರ್ತು ಕ್ರಮಗಳ ಬಗ್ಗೆ ಪ್ರಾಯೋಗಿಕವಾಗಿ ಪ್ರದರ್ಶಿಸ ಲಾಯಿತು. ಕಾರ್ಯಕ್ರಮದಲ್ಲಿ ಅಗ್ನಿಶಾ ಮಕ ದಳ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ಜಂಟಿಯಾಗಿ ಹಮ್ಮಿಕೊಂ ಡಿದ್ದ ವಿವಿಧ ರಕ್ಷಣಾ ಕಾರ್ಯಾ ಚರಣೆಗಳ ಪ್ರಾತ್ಯಕ್ಷಿಕೆ ಯನ್ನು ಸಾರ್ವ ಜನಿಕರು ಆಸಕ್ತಿಯಿಂದ ವೀಕ್ಷಿಸಿ ದರು.

ಈ ವೇಳೆ ಬಳ್ಳಾರಿ ತಾಲ್ಲೂಕು ಉಪ ತಹಸೀಲ್ದಾರ ವಿನಾಯಕಗೌಡ, ಗೃಹರಕ್ಷಕ ದಳದ ಅಧಿಕಾರಿ ಹೆಚ್.ತಿಪ್ಪೇಸ್ವಾಮಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾ ಖೆಯ ಅಧಿಕಾರಿ ಹನುಮನಗೌಡ ಪೊಲೀಸ್ ಪಾಟೀಲ್, ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕ ಮಹಾಂತೇಶ್ ಕಂಚಿನ ಮಠ, ಜಿಲ್ಲಾ ಉದ್ಯೋಗಾಧಿಕಾರಿ ಹಟ್ಟಪ್ಪ ಸೇರಿದಂತೆ ವಿವಿಧ ಇಲಾ ಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಾರ್ವಜನಿ ಕರು ಉಪಸ್ಥಿ ತರಿದ್ದರು.



ಕೆ.ವಿ. ಪ್ರಭಾಕರ್‌ರಿಗೆ ಅಭಿನಂದನೆ, ಹೊಸ ಜಾಹೀರಾತು ನೀತಿ ಬಗ್ಗೆ ಚರ್ಚೆ

ಬೀದರ,ಮೇ.21-

ಇಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆ ಗಾರರಾದ ಸನ್ಮಾನ್ಯ ಕೆ ವಿ ಪ್ರಭಾಕರ್ ಅವರನ್ನು ಬೀದರಿನ ನಮ್ಮ ಸಂಘದ ತಂಡ ಇಂದು ಮುಖ್ಯಮಂತ್ರಿ ಗೃಹ ಕಚೇರ ಕೃಷ್ಣದಲ್ಲಿ ಭೇಟಿಯಾಗಿ ಸರ್ಕಾರದ ಮೂರು ವರ್ಷದ ನಿರಂತರ ಅವಧಿ ಪೂರೈಸಿರುವ ಹಿನ್ನೆಲೆಯಲ್ಲಿ ಅವರನ್ನು ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ಹೊಸ ಜಾಹೀರಾತು ನೀತಿ ಯಾವ ರೀತಿ ಬಗ್ಗೆಪರಾಮರ್ಶಿಸಲಾಯಿತು ಮತ್ತು ಎಂಬ ಇತ್ಯಾದಿ ಜಾಹೀರಾತುಗಳ ಬಗ್ಗೆ ಸವಿಸ್ತಾರ ಚರ್ಚೆಯನ್ನು ಅವರ ಜೊತೆಯಲ್ಲಿ ನಡೆಸಲಾಯಿತು.

ರಾಜ್ಯದ ವಿವಿಧ ಸಂಪಾದಕರ ಸಂಘವು ಸೇರಿದಂತೆ ಕೆಲಪತ್ರಿಕಾ ಸಂಘ ಸಂಸ್ಥೆಗಳ ಮನವಿಗಳನ್ನು ಪರಿಗಣಿಸಿ ಸರಳ ರೀತಿಯಲ್ಲಿ ಆದಷ್ಟು ಪರಿವರ್ತನೆಯ ಜಾಹೀರಾತು ನೀತಿಯನ್ನು ಭವಿಷ್ಯ ಮುಂದಿನ ತಿಂಗಳಲ್ಲಿ ಬಿಡುಗಡೆಯಾಗಲಿದೆ. ಎಂದು ಅವರೇ ತಿಳಿಸಿದರು ಅನೇಕ ಬದಲಾವಣೆಗಳೊಂದಿಗೆ ಹೊರ ಬರಲಿದೆ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘದ ಬೀದರ್ ಘಟಕದ ಅಧ್ಯಕ್ಷ ವಿಜಯಕುಮಾರ್ ಪಾಟೀಲ್. ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಪಾಟೀಲ್. ರಾಜ್ಯ ಪ್ರತಿನಿಧಿ ಅಜಯ್ ಭೋಸ್ಲೆ. ಹಿರಿಯ ಪತ್ರಕರ್ತರು ಮಾಜಿ ಏವಿ ಅಧ್ಯಕ್ಷರಾದ ಮಾಳಪ್ಪ ಅಡಸಾರೆ ಅವರು ನನ್ನ ಅಂದರೆ ವಿಜಯಕುಮಾರ್ ಪಾಟೀಲ್ ಜೊತೆಗಿದ್ದರು.

ಪರಿಶಿಷ್ಟ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ 'ಜನ್ ಭಾಗೀದಾರಿ' ಕಾರ್ಯಕ್ರಮ

ವಿಜಯನಗರ ,ಮೇ.21-

ಧರ್ತಿ ಆಬಾ ಜನಜಾತೀ ಯ ಗ್ರಾಮ ಉತ್ಕರ್ಷ ಅಭಿಯಾನ ದಡಿಜನ್ ಭಾಗೀದಾರಿ- ಸಬ್ಸೆ ಡೋರ್ ಸಬ್ಸೆ ಪೆಹ್ಲೆ ಅಭಿಯಾನ'ವನ್ನುಕೇಂದ್ರ ಹಾಗೂ ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡದ ಸಮುದಾಯಗಳ ಶ್ರೇಯೋಭಿ ವೃದ್ಧಿಗಾಗಿ 'ಜನ್ ಭಾಗೀದಾರಿ' ಕಾರ್ಯಕ್ರಮ ಆಯೋಜಿಸಲಾಗಿದೆ.

ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವತಿಯಿಂದಜಿಲ್ಲೆಯಾದ್ಯಂತಇದೇ ಮೇ 25 ರವರೆಗೆ ಜನ್ ಭಾಗೀದಾರಿ- ಸಬ್ಸೆ ಡೋರ್, ಸಬ್ಸೆ ಪೆಹ್ಲೆ ಎಂಬ ಐಇಸಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಬುಡಕಟ್ಟು ಸಮುದಾ ಯದಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಪ್ರಯೋಜನಗಳನ್ನು ತಲುಪಿಸುವು ದು ಮತ್ತುಅದಕ್ಕೆ ಬೇಕಾಗುವ ಅಗತ್ಯ ದಾಖಲಾತಿಗಳನ್ನು ಒದಗಿಸುವ ನಿಟ್ಟಿನಲ್ಲಿಗ್ರಾಮ ಮಟ್ಟದಲ್ಲಿಜಾಗೃತಿ ಮತ್ತು ಪ್ರಯೋಜನ ಶುದ್ಧತ್ವ ಶಿಬಿರ, ಆರೋಗ್ಯತಪಾಸಣಾ ಶಿಬಿರ ಹಾಗೂ ಬುಡಕಟ್ಟುಜನರಲ್ಲಿಕಂಡುಬರುವ ಸಿಕಲ್ ಸೆಲ್ ಅನೀಮಿಯಾಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಅವಧಿ ಯಲ್ಲಿ ಪರಿಶಿಷ್ಟ ಪಂಗಡದಜನರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವು ದು.ಶಿಕ್ಷಣ, ಆರೋಗ್ಯ, ಪಶುಸಂ ಗೋಪನೆ, ಕೃಷಿ ಸೇರಿದಂತೆ ವಿವಿಧ ಇಲಾಖೆಗಳ ಅಡಿಯಲ್ಲಿ ಸಿಗುವ ಸೌಲಭ್ಯಗಳು ಮತ್ತು ಯೋಜನೆಗ ಳನ್ನು ಅರ್ಹರ ಮನೆಬಾಗಿಲಿಗೆ ತಲುಪಿಸುವುದಾಗಿದೆ.ಇದರೊಂದಿಗೆ ಪ್ರಮುಖವಾಗಿ ಪ್ರಧಾನ ಮಂತ್ರಿ ಜನಮನ್ ಹಾಗೂ ಡಿಎ-ಜೆಜಿ ಯುಎ ಯೋಜನೆಗಳ ಕುರಿತು ಸಮು ದಾಯದಜನರಲ್ಲಿ ವ್ಯಾಪಕ ಅರಿವು ಮೂಡಿಸುವುದು ಈ ಅಭಿಯಾನದ ಮುಖ್ಯಉದ್ದೇಶ ವಾಗಿದೆಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿದೆ.

ಅಂಗನವಾಡಿ, ಕಿಮ್ಸ್‌ಗೆ ಆಹಾರ ಆಯೋಗ ದ ಅಧ್ಯಕ್ಷರ ಭೇಟಿ, ಪರಿಶೀಲನೆ

ಕೊಪ್ಪಳ ಮೇ 21-

ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ. ಹೆಚ್.ಕೃಷ್ಣ ಹಾಗೂ ಸದಸ್ಯರಾದ ಮಾರುತಿ ಎಂ.ದೊಡ್ಡಲಿಂಗಣ್ಣವರ ಅವರು ಮೇ 20ರಂದು ಕೊಪ್ಪಳ ಜಿಲ್ಲೆಯಲ್ಲಿ ಆಕಸ್ಮಿಕ ಭೇಟಿ ಕೈಗೊ ಂಡರು.

ಬೆಳಗ್ಗೆ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿ, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಕಾರ್ಯಾಚರಣೆ ಆರಂಭಿಸಿದ ಅಧ್ಯಕ್ಷರು, ಜಿಲ್ಲಾಡಳಿತ ಭವನದಿಂದ ನೇರವಾಗಿ ಕೊಪ್ಪಳ ಸಿಟಿಯ ಗಾಂಧೀ ನಗರದಲ್ಲಿನ ವಾರ್ಡ್ ನಂಬರ 23ರಲ್ಲಿನ 2ನೇ ಅಂಗನವಾಡಿಗೆ ಕೇಂದ್ರಕ್ಕೆ ತೆರಳಿ ಮೊದಲಿಗೆ ಆಹಾರ ದಾಸ್ತಾನು ಕೊಠಡಿ ಪ್ರವೇಶಿಸಿ ಪರಿಶೀಲನೆ ನಡೆಸಿದರು.

ಈ ದಿನ ಮೆನು ಚಾಟ್ ಪ್ರಕಾರ ಮಕ್ಕಳಿಗೆ ಏನು ಕೊಡಬೇಕು? ಎಂದು ಕೇಳಿ, ಸತತ 2 ಗಂಟೆಗಳ ಕಾಲ ನಾನಾ ವಹಿ ಗಳನ್ನು ಪರಿಶೀಲಿಸಿದರು. ಅಂಗನವಾಡಿಗಳಲ್ಲಿ ದಾಖಲಾದ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿ ಯರ ಸಂಖ್ಯೆ ಬಗ್ಗೆ ಕೇಳಿದರು. ಕಾಲಕಾಲಕ್ಕೆ ಭೇಟಿ ನೀಡ್ತೀರಾ ಎಂದು ಸಿಡಿಪಿಓ ಅವರಿಗೆ ಪ್ರಶ್ನಿಸಿದರು. 6 ತಿಂಗಳಿನಿಂದ 3 ವರ್ಷದವರೆಗಿನ ಮಕ್ಕಳಿಗೆ, ಗರ್ಭಿಣಿ ಮತ್ತು ಬಾಣಂ ತಿಯರ ಮನೆಗೆ ನೀಡುವ ಆಹಾರ ವಿತರಣಾ ಪುಸ್ತಕದಲ್ಲಿನ ವಿವರವನ್ನು ಇದೆ ವೇಳೆ ಪರಿಶೀಲಿಸಿದರು. ಅಂಗನವಾಡಿ ಯಲ್ಲಿ ಮೊಟ್ಟೆ ಖರೀದಿ ಬಿಲ್ಲುಗಳು ಸಮರ್ಪಕವಾಗಿಲ್ಲ. ಆಹಾರ ವಿತರಣೆ ವಹಿಯಲ್ಲಿ ದಾಖ ಲಾದ ಗರ್ಭಿ ಣಿಯರು ಮತ್ತು ಬಾಣಂತಿಯರ ವಿಳಾಸ ಮತ್ತು ಸಂಪರ್ಕ ಸಂಖ್ಯೆ ಹೊಂದಾಣಿಕೆ ಆಗುತ್ತಿಲ್ಲ. ಬ್ಯಾಂಕಿನಿಂದ ಡ್ರಾ ಮಾಡಿದ ಹಣಕ್ಕೆ ಸರಿಯಾದ ಲೆಕ್ಕಪತ್ರ ವಿಲ್ಲ ಎಂದು ಆಯೋಗದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಅಧ್ಯಕ್ಷರು, ಮಧ್ಯಾಹ್ನ 1.25ರ ವೇಳೆಗೆ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಭೇಟಿ ನೀಡಿದರು.

ಆಸ್ಪತ್ರೆ ಯಲ್ಲಿನ ತುರ್ತು ಚಿಕಿತ್ಸಾ ನಿಗಾ ವಾರ್ಡನಲ್ಲಿನ ರೋಗಿಗಳನ್ನು ಮಾತನಾಡಿಸಿ, ಬಾಳೆ ಹಣ್ಣು, ಮೊಟ್ಟೆ ಕೊಟ್ಟಿದ್ದಾರಾ? ಎಂದು ರೋಗಿಗಳಿಗೆ ಕೇಳಿ ಮಾಹಿತಿ ಪಡೆದುಕೊಂಡರು. ಬಳಿಕ ಆಸ್ಪತ್ರೆ ಆವರಣದಲ್ಲಿನ ಅಡುಗೆ




ತಯಾರಿಕಾ ಕೇಂದ್ರಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಆಹಾರ ದಾಸ್ತಾನು ಕೊಠಡಿಯಲ್ಲಿನ ಮಸಾಲ ಸೇರಿದಂತೆ ವಿವಿಧ ಸಾಮಗ್ರಿಗಳ ಮೇಲಿನ ದಿನಾಂಕನ್ನು ಪರೀಕ್ಷಿಸಿ ದರು. ಅಕ್ಕಿ ಖರೀದಿಗೆ ಸಂಬಂಧಿ ಸಿದಂತೆ ಟೆಂಡರ್ ಫಾರ್ಮ ಹಾಗೂ ಬೇರೆ ಬೇರೆ ದಾಖಲಾತಿಗಳನ್ನು ಪರಿಶೀಲಿಸಿದರು.

ಬಳಿಕ ಚಿಕ್ಕಮಕ್ಕಳ ವಿಭಾಗದಲ್ಲಿನ ಸ್ಟೋರ ರೂಮಗೆ ಭೇಟಿ ನೀಡಿ ಅಲ್ಲಿನ ಅಡುಗೆ ಸಾಮಗ್ರಿಗಳನ್ನು ಪರಿಶೀಲಿಸಿದರು. ಬಳಿಕ ವೈದ್ಯಕೀಯ ಅಧೀಕ್ಷಕರ ಕಚೇರಿಯಲ್ಲಿ ಸಭೆ ನಡೆಸಿ ಆಸ್ಪತ್ರೆ ಯಲ್ಲಿನ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಆಸ್ಪತ್ರೆ ಯಲ್ಲಿನ ರೋಗಿಗಳಿಗೆ ಗುಣಮಟ್ಟದ ಆಹಾರ ಪೂರೈಕೆಯಲ್ಲಿ ಲೋಪ ಕಂಡು ಬಂದ ಹಿನ್ನಲೆಯಲ್ಲಿ ಆಸ್ಪತ್ರೆ ಯ ನರ್ಸಿಂಗ್ ಸೂಪರಿಂಟೆಂಡೆಂಟ್ ಅವರ ಮೇಲೆ ಕ್ರಮ ಜರುಗಿಸಲು ಮತ್ತು ಆಸ್ಪತ್ರೆಗೆ ಆಹಾರ ಸಾಮಗ್ರಿ ಪೂರೈಸುವ ಈಗಿನ ಗುತ್ತಿಗೆದಾರರನ್ನು ಬದಲಿಸಲು ಕ್ರಮ ವಹಿಸಬೇಕು ಎಂದು ವೈದ್ಯಕೀಯ ಅಧೀಕ್ಷಕರಾದ ಡಾ.ಮಂಜುನಾಥ ಪಿ ಸಾಲ್ಮನಿ ಅವರಿಗೆ ಆಯೋಗದ ಅಧ್ಯಕ್ಷರು ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಡಿಎಚ್‌ಓ ಡಾ.ಲಿಂಗ ರಾಜ್, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶನ ಡಾ.ವೈಜನಾಥ ಇಟಗಿ, ವೈದ್ಯಾಧಿ ಕಾರಿ ಡಾ.ಅಲಕಾನಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾ ಖೆಯ ಉಪ ನಿರ್ದೇಶಕರಾದ ಅಮ ರೇಶ ಹಾವಿನ, ಸಿಡಿಪಿಓ ರೋಹಿಣಿ ಕೊಟಗಾರ, ಜಿಲ್ಲಾ ನಿರೂಪಣಾಧಿ ಕಾರಿ ನಟರಾಜ ಹಾಗೂ ಇತರರು ಇದ್ದರು.

ಎಸ್‌ಸಿಪಿ ಟಿಎಸ್‌ಟಿ ಯೋಜನೆಗಳ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ

ಎಸ್ ಸಿ ಪಿ - ಟಿ ಎಸ್ ಪಿ ಯೋಜನೆಗಳು ಅರ್ಹ ಶೋಷಿತ ವರ್ಗದ ಫಲಾನುಭವಿಗಳಿಗೆ ತಲುಪಲಿ :ಡಾ. ಎಲ್. ಮೂರ್ತಿ



ಹೊಸಪೇಟೆ ,ಮೇ.21-

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಪರಿಶಿಷ್ಟ ಜಾತಿಉಪಯೋಜನೆ ಮತ್ತುಗಿರಿಜನಉಪಯೋಜನೆಅನುದಾನ ಹಾಗೂ ಯೋಜನೆಗಳು ಯಾವುದೇ ಕಾರಣಕ್ಕೂ ದುರುಪಯೋಗವಾಗಬಾರದು. ಸಮುದಾಯದ ಅತ್ಯಂತ ಹಿಂದುಳಿದ, ಶೋಷಿತ ವರ್ಗದಕಟ್ಟಕಡೆಯ ಫಲಾನುಭವಿಗೆ ಈ ಸೌಲಭ್ಯಗಳು ತಲುಪುವಂತೆ ಅಧಿಕಾರಿಗಳು ಸಂಪೂರ್ಣಜವಾಬ್ದಾರಿಯಿಂದ ಶ್ರಮವಹಿಸಬೇಕು ಎಂದು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಆಯೋಗದಅಧ್ಯಕ್ಷ ಡಾ.ಎಲ್.ಮೂರ್ತಿಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣ ದಲ್ಲಿ ಮಂಗಳವಾರ ಇಲಾಖಾವಾರು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಎಸ್‌ಸಿ, ಎಸ್‌ಟಿ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳಿಗೆ ಹಾಗೂ ಅವರಿಗೆ ಸಿಗಬೇಕಾದ ಕಾನೂನಾತ್ಮಕ ಸೌಲತ್ತುಗಳಿಗೆ ಧಕ್ಕೆತರುವದನ್ನುಯಾವುದೇಕಾರಣಕ್ಕೂ ಸಹಿಸುವುದಿಲ್ಲ. ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಧೋರಣೆಅನುಸರಿಸುವಅಥವಾ ನಿರ್ಲಕ್ಷ್ಯತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಯೋಜನೆಗಳು ಕೇವಲ ಕಾಗದದ ಲೆಕ್ಕಗಳಿಗೆ ಸೀಮಿತವಾಗಬಾರದು. ಬದಲಾಗಿ ಅವು ಶೋಷಿತರ ಬದುಕಿನಲ್ಲಿ ಬೆಳಕಾಗಬೇಕು.ಈ ನಿಟ್ಟಿನಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ, ನಿಜವಾದ ಶೋಷಿತ ಹಾಗೂ ವಂಚಿತ ಸಮಾಜದಕಟ್ಟಕಡೆಯ ವ್ಯಕ್ತಿಗೂ ಯೋಜನೆಗಳ ತಲುಪಿಸುವಲ್ಲಿ ಶ್ರಮವಿಸಬೇಕುಎಂದು ತಿಳಿಸಿದರು.

ಇಲಾಖೆಯಟೆಂಡರ್ ಪ್ರಕ್ರಿಯೆಅಥವಾ ಬೃಹತ್‌ಯೋಜನೆಯಲ್ಲಿಕಾಮಗಾರಿ ಹಂಚಿಕೆ ಮಾಡಬೇಕಾದರೆ ಸ್ಥಳೀಯ ಶೋಷಿತ ವರ್ಗದಕಾರ್ಮಿಕರಿಗೆ ಪ್ರಥಮಾದ್ಯತೆ ನೀಡಬೇಕು. ಈ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ಶಿಕ್ಷಣಿಕವಾಗಿ ಸಮಾಜದ ಮುನ್ನಲೆಗೆತರಬೇಕಿದೆಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕೂಡ್ಲಿಗಿ ತಾಲೂಕಿನ ವ್ಯಾಪ್ತಿಗೆ ಒಳಪಡುವ ಗೋವಿಂದ ಗಿರಿತಾಂಡಾದ ಸಮಗ್ರ ನವೀಕರಣಕ್ಕಾಗಿಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳ ಅನುದಾನದ ಡಿಟಟ್ಟು 3.5 ಕೋಟಿ ರೂಪಾಯಿಗಳ ಬೃಹತ್ ಪ್ಯಾಕೇಜ್ ಮಂಜೂರಾಗಿದೆ.ಈ ಕಾಮಗಾರಿಯ ಇ-ಪ್ರೊಕ್ಯೂರ್‌ಮೆಂಟ್ ಹಾಗೂ ಟೆಂಡರ್ ಪ್ರಕ್ರಿಯೆ ಸಹ ಈಗಾಗಲೇ ಪೂರ್ಣಗೊಂಡಿದ್ದು, ರಾವತ್‌ಎಂಬುವವರಿಗೆಗುತ್ತಿಗೆ ವಹಿಸಲಾಗಿದೆಎಂದು ಮಾಹಿತಿ ನೀಡಿದರು.

ವಿಂಡ್ ಮಿಲ್ ಅಕ್ರಮಕ್ಕೆ ಜಂಟಿಕಾರ್ಯಾಚರಣೆ:

ಭೂಮಿ ಹಾಗೂ ಪಟ್ಟಾ ಭೂ ಮಿರಕ್ಷಣೆ ನಿಯಮಗಳ ಪ್ರಕಾರಜನವಸತಿ ಪ್ರದೇಶದಿಂದ ಕನಿಷ್ಠ 500 ಮೀಟರ್‌ದೂರಇರಬೇಕಾದ ವಿಂಡ್ ಮಿಲ್‌ಗಳು ನಿಯಮಬಾಹಿರವಾಗಿ ಕೇವಲ 70 ರಿಂದ 100 ಮೀಟರ್‌ಅಂತರದಲ್ಲಿ ನಿರ್ಮಾಣವಾಗಿವೆ. ವಿದ್ಯಾರ್ಥಿಗಳ ನೆಮ್ಮದಿ ಕೆಡಿಸುತ್ತಿರುವುದರಜೊತೆಗೆಅವರ ವಿದ್ಯಾಭ್ಯಾಸಕ್ಕೆ ಕುತ್ತು ತರುತ್ತಿವೆ ಎಂದು ಆಯೋಗಕ್ಕೆ ದೂರು ಬಂದಿವೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಲು ಸೂಚನೆ ನೀಡಿದರು.

ಇದರೊಂದಿಗೆ ಎಸ್‌ಸಿ, ಎಸ್‌ಟಿ ಸಮುದಾಯದ ಸ್ವಂತ ಪಟ್ಟಾಜಮೀನು ಹಾಗೂ ಮಂಜೂರಾತಿ ಭೂಮಿಯನ್ನು ಬಲ ವಂತವಾಗಿ ಕಬಳಿಸುತ್ತಿರುವ ಬಗ್ಗೆಯೂ ಸಾಕಷ್ಟು ದೂರುಗಳು ಕೇಳಿಬರುತ್ತಿವೆ. ಇಂತಹರಿಯಲ್‌ಎಸ್ಟೇಟ್ ಮಾಫಿಯಾ ವಿರುದ್ಧದೌರ್ಜನ್ಯತಡೆಕಾಯ್ದೆಯಡಿಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿನ ನೀಡಿದರು.

ಹೊಸಪೇಟೆಯ 253 ಪೌರಕಾರ್ಮಿಕರಿಗೆ ಸಕಾಲದಲ್ಲಿ ವೇತನ ಪಾವತಿಸಲಾಗುತ್ತಿದೆ. ಇಎಸ್‌ಐ, ಪಿಎಫ್ ಹಾಗೂ ಗೃಹಭಾಗ್ಯ ಯೋಜನೆಯಡಿ 88 ಮನೆ ವಿತರಣೆ ಮಾಡಲಾಗಿದೆ.ಆದರೆಮರಿಯಮ್ಮನಹಳ್ಳಿಯಲ್ಲಿ ಪೌರಕಾರ್ಮಿಕರಿಗೆ 11 ತಿಂಗಳ ವೇತನ ಬಾಕಿ ಉಳಿಸಿಕೊಂಡಿದ್ದಕ್ಕೆ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಅವರು ತಕ್ಷಣ ವೇತನ ಬಿಡುಗಡೆಗೊಳಿಸಬೇಕು ಎಂದು ಕಡಕ್ ಸೂಚನೆ ನೀಡಿದರು.

ಜಿಲ್ಲೆಯ ಜಿಂದಾಲ್ ಸೇರಿ 4-5 ಪ್ರಮುಖ ಖಾಸಗಿ ಕಂಪನಿಗಳಲ್ಲಿ ಭೂಮಿ ಕಳೆದುಕೊಂಡ ಸ್ಥಳೀಯ ಶೋಷಿತ ವರ್ಗದಕನಿಷ್ಠ 200-300 ನಿರುದ್ಯೋಗಿಯುವಕ, ಯುವತಿಯರಿಗೆಉದ್ಯೋಗ ಕಲ್ಪಿಸಿಕೊಡುವ ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಜಂಟಿಯಾಗಿ ವಿಶೇಷ ಬೃಹತ್‌ಉದ್ಯೋಗ ಮೇಳ ಆಯೋಜಿಸಲುಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಸಿಇಒ ಅವರಿಗೆ ಸೂಚನೆ ನೀಡಿದರು.ಅದಕ್ಕೆ ಅಧಿಕಾರಿಗಳು ಸಕರಾತ್ಮಕವಾಗಿ ಸ್ಪಂದಿಸಿದರು.

ಮೊರಾರ್ಜಿ ಮತ್ತು ಸರ್ಕಾರಿ ಹಾಸ್ಟೆಲ್‌ಗಳಿಗೆ ಬರುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶಕಲ್ಪಿಸಬೇಕು. ಸಣ್ಣ ಪುಟ್ಟ ಲೋಪದೋಷಗಳಿದ್ದಲ್ಲಿ ಸರಿಪಡಿಸಕೊಂಡು ವಸತಿ ಶಾಲೆ, ನಿಲಯಗಳ ಪ್ರವೇಶಕ್ಕೆ ಅನುವು ಮಾಡಿಕೊಡುವಂತೆ ತಿಳಿಸಿದರು,

ಸುಪ್ರೀಂಕೋರ್ಟ್‌ಅಂತಿಮಆದೇಶ ಬರುವವರೆಗೆಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಅಲೆಮಾರಿ, ಅರೆಅಲೆಮಾರಿ ಮತ್ತು ಎಸ್‌ಸಿ, ಎಸ್‌ಟಿ ಕುಟುಂಬಗಳನ್ನು ಒಕ್ಕಲೆಬ್ಬಿಸದಂತೆಅರಣ್ಯ ಸಂರಕ್ಷಣಾಧಿಕಾರಿಗಳಿಗೆ ತಿಳಿಸಿದ ಅವರು, ಸಮುದಾಯದಅಭಿವೃದ್ಧಿಯೇ ಆಯೋಗದ ಮುಖ್ಯಗುರಿಯಾಗಿದ್ದು, ಅಧಿಕಾರಿಗಳು ಕೇವಲ ಅಂಕಿ-ಅಂಶಗಳನ್ನು ನೀಡುವುದ ಬಿಟ್ಟು, ತಳಮಟ್ಟದಲ್ಲಿ ಬದಲಾವಣೆತರಲು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಲು ಕಾರ್ಯಪ್ರವೃತ್ತರಾಗಬೇಕಿದೆ ಎಂದರು.

ಈ ವೇಳೆ ಜಿಲ್ಲಾಧಿಕಾರಿಕವಿತಾಎಸ್. ಮನ್ನಿಕೇರಿ ಪ್ರತಿಕ್ರಿಯಿಸಿ, ಆಯೋಗ ಸೂಚಿಸಲಾದ ಎಲ್ಲಾಕಾಮಗಾರಿ, ಕಲ್ಯಾಣ ಯೋಜನೆ ಗಳನ್ನು ಶೇ.100 ರಷ್ಟುಅನುಷ್ಠಾನಗೊಳಿಸಲಾ ಗುವುದು ಮತ್ತು ಸಮಾಜದಕಟ್ಟಕಡೆಯ ವ್ಯಕ್ತಿಗೂ ಯೋಜನೆಗಳ ತಲುಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.



ಬಡವರ ಬದುಕಿನ ಕಾಳಜಿ ಇರಲಿ: ಆಹಾರ ಆಯೋಗದ ಅಧ್ಯಕ್ಷ ಡಾ.ಹೆಚ್.ಕೃಷ್ಣ ಅವರಿಂದ ಅಧಿಕಾರಿಗಳಿಗೆ ಪಾಠ

ಕೊಪ್ಪಳ ಮೇ 21-

ಅಧಿಕಾರಿಯಾಗಿ ಸೇವೆ ಮಾಡುವ ಅವಕಾಶ ಎಲ್ಲರಿಗು ಸಿಗುವುದಿಲ್ಲ. ಹಾಗಾಗಿ ತಾವು ಅಧಿಕಾರಿಗಳಾಗಿ ಇದನ್ನರಿತು ಜನಸೇವೆಯಲ್ಲಿ ತೊಡಗಬೇಕು. ಬಡವರ ಬದುಕಿನ ಬಗ್ಗೆ ತುಸು ಹೆಚ್ಚಿನ ಕಾಳಜಿ ಹೊಂದಬೇಕು ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ ಅವರು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೇ 20ರಂದು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಯಾರೇ ವ್ಯಕ್ತಿ ಇರಲಿ. ಯಾರೂ ಸಹ ಹಸಿವಿನಿಂದ ಬಳಲಬಾರದು ಎಂಬುದನ್ನು ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ 2013 ಸ್ಪಷ್ಟಪಡಿಸುತ್ತದೆ. ಕಡು ಬಡವರು ಗರ್ಭಾಶಯದಿಂದಲೇ ಸರ್ಕಾರದ ಸೌಕರ್ಯ ಪಡೆಯಲು ಆರಂಭಿಸಿ ಜನಿಸಿದ ಬಳಿಕ ಬೇರೆ ಬೇರೆ ವಯೋಮಾನದಲ್ಲಿ ಸಹ ಸೌಕರ್ಯಕ್ಕೆ ಅರ್ಹರಾಗಿ ವೃದ್ಯಾಪ ವೇತನದ ವರೆಗೂ ಸೌಕರ್ಯ ಪಡೆಯುತ್ತಾರೆ. ಕೆಲವರು ಬಡತನದಲ್ಲಿ ಜನಿಸಿ ಬಳಿಕ ಆರ್ಥಿಕವಾಗಿ ಸಬಲರಾಗುತ್ತಾರೆ. ಇನ್ನು ಕೆಲವರು ಜನನದಿಂದ ಸಾಯುವವರೆಗೂ ಬಡತನ ಹೊದ್ದೆ ಬದುಕುತ್ತಾರೆ.

ಅಂತಹ ಬಡ ವರ್ಗದ ಜನರ ಬಗ್ಗೆ ಅಧಿಕಾರಿಗಳು ಕಾಳಜಿ ಹೊಂದಬೇಕು. ನಮ್ಮ ಸುತ್ತಲು ಯಾರಾದರು ಬಡವರು ಕಾಣಿಸಿದರೆ ಅವರ ಬಗ್ಗೆ ಗಮನ ಹರಿಸಿ ಸರ್ಕಾರದಿಂದ ಅವರಿಗೆ ಸಿಗಬೇಕಾದ ಸೌಕರ್ಯ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡಿದರು.

ಅಧಿಕಾರಿಗಳಿಗೆ ನಿರ್ದೇಶನ: ಆಯೋಗವು ಮೇ 19ರಂದೇ ಕೊಪ್ಪಳ ನಗರಕ್ಕೆ ಆಗಮಿಸಿ ವಿವಿಧೆಡೆ ಭೇಟಿ ಕೈಗೊಂಡಿದ್ದು, ಆಯಾ ಕಡೆಗೆ ಕಂಡು ಬರುವ ನ್ಯೂನ್ಯತೆಗಳ ಬಗ್ಗೆ ಅಧಿಕಾರಿಗಳ ಗಮನಕ್ಕೆ ತರುತ್ತೇವೆ. ಆಯಾ ಇಲಾಖೆಯ ಅಧಿಕಾರಿಗಳು ನ್ಯೂನತೆಗಳ ಬಗ್ಗೆ ತಿಂಗಳೊಳಗೆ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಬೇಕು ಎಂದು ಅಧ್ಯಕ್ಷರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ, ಆಯೋಗದ ಸದಸ್ಯರಾದ ಲಿಂಗರಾಜ ಕೋಟೆ, ಸುಮಂತ್ ರಾವ್, ಮಾರುತಿ ಎಂ.ದೊಡ್ಡಲಿಂಗಣ್ಣವರ, ಎ.ರೋಹಿಣಿ ಪ್ರಿಯ, ಕೆ.ಎಸ್. ವಿಜಯಲಕ್ಷ್ಮಿ ಮತ್ತು ಸದಸ್ಯ ಕಾರ್ಯದರ್ಶಿ ಸುಜಾತ ಡಿ ಹೊಸಮನಿ, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

30 ರಂದು ಮಾಹಿತಿ ಹಕ್ಕು ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರ

ವಿಜಯನಗರ,ಮೇ.21-

ಜಿಲ್ಲೆಯಎಲ್ಲಾಇಲಾಖೆಯಜಿಲ್ಲಾ ಮತ್ತುತಾಲ್ಲೂಕು ಮಟ್ಟದ ಸಾರ್ವಜನಿಕ ಮಾಹಿತಿ

ಅಧಿಕಾರಿ ಗಳಿಗೆ ಇದೇ ಮೇ 30 ರಂದು ನಗರದಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು ಒಂದು ದಿನದಕಾರ್ಯಾಗಾರ ಹಾಗೂ ಸಂವಾದಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ.

ಕಾರ್ಯಾಗಾರಕ್ಕೆ ಜಿಲ್ಲೆಯಎಲ್ಲಾ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾ ರಿಗಳು, ಪೊಲೀಸ್ ಇಲಾಖೆ ಅಧಿ ಕಾರಿ ಗಳು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಾರ್ವ ಜನಿಕ ಮಾಹಿತಿ ಅಧಿಕಾರಿಗಳು ತಪ್ಪದೇ ಹಾಜರಾಗುವಂತೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ನವೋದಯ ಸಂಸ್ಥೆಯಿಂದ ಸಂಚಾರಿ ಪೊಲೀಸರಿಗೆ 50 ಬ್ಯಾರಿಕೇಡ್‌ಗಳ ಕೊಡುಗೆ

ಎಂದು ಅಭಿನಂದಿಸಿದ ಅವರು, ಯುವ ಸಮುದಾಯ ಡ್ರಗ್ಸ್ ನಿಂದ ದೂರ ಇರಬೇಕು ಎಂದು ಎಚ್ಚರಿಕೆ ನೀಡಿದರು. ವೈದ್ಯರು ಪ್ರಿಸ್ಕ್ರಿಪ್ಷನ್ ಇಲ್ಲದೆ ಔಷಧಿ ವಿತರಿಸಬಾರದು ಎಂದು ಸೂಚಿಸಿದರು. ರಾಜ್ಯದಲ್ಲಿ ಗಾಂಜಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲರೂ ಜಾಗೃತರಾಗಿರಬೇಕು ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ. ಕುಮಾರಸ್ವಾಮಿ ಮಾತನಾಡಿ, ವೈದ್ಯರು ಹಾಗೂ ಯುವಕರು ಸಂಚಾರ ನಿಯಮ ಪಾಲನೆಯಲ್ಲಿ ಮಾದರಿಯಾಗಬೇಕು ಎಂದು ಹೇಳಿದರು. ಹೆಲ್ಮೆಟ್ ಜೀವ ರಕ್ಷಕವಾಗಿದ್ದು, ಪ್ರತಿಯೊಬ್ಬರೂ ಕಡ್ಡಾಯವಾಗಿ ಧರಿಸಬೇಕು ಎಂದು ತಿಳಿಸಿದರು. ನವೋದಯ ಸಂಸ್ಥೆ ನೀಡಿದ ಬ್ಯಾರಿಕೇಡ್‌ಗಳು ಸಂಚಾರ ನಿಯಂತ್ರಣಕ್ಕೆ ಸಹಕಾರಿಯಾಗಲಿವೆ ಎಂದರು.

ಡಿವೈಎಸ್ಪಿ ಶಾಂತವೀರ ಅವರು ಸಾರ್ವಜನಿಕರಿಗೆ ಸಂಚಾರ ನಿಯಮಗಳ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಸಂಚಾರ ಪೊಲೀಸ್ ಠಾಣೆಯ ಸಿಬ್ಬಂದಿ, ನವೋದಯ ಶಿಕ್ಷಣ ಮತ್ತು ಆಸ್ಪತ್ರೆ ಸಂಸ್ಥೆಯ ವೈದ್ಯರು,

ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನ ಆಚರಣೆ

ಕೃತ್ಯಗಳನ್ನು ಮುಂದುವರೆಸುವರು. ಇದರಿಂದ ಅಮಾಯಕರು ಜೀವ ಕಳೆದುಕೊಳ್ಳುವ ಜೊತೆಗೆ ದೇಶದ ಅಭಿವೃದ್ಧಿ ಕುಂಟಿತಗೊಳ್ಳುವುದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕ ಶರಣಬಸವರಾಜ ಕೆ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ ಸೇರಿದಂತೆ ಕಚೇರಿಯ ಸಿಬ್ಬಂದಿಗಳು ಇದ್ದರು.

ಗಣಿಗಾರಿಕೆ ತಡೆಗೆ ಆಗ್ರಹಿಸಿ ತಹಶೀಲ್ದಾರರಿಗೆ ಮನವಿ

36 2490) ಹಾಗೂ ಜೆ.ಸಿ.ಬಿ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ, ಇಂತಹ ಭೂಗಳ್ಳರನ್ನು ತಾಲ್ಲೂಕಿನಿಂದ ಗಡಿಪಾರು ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಒಕ್ಕೂಟದ ಪ್ರಮುಖ ಪದಾಧಿಕಾರಿಗಳಾದ ಬಸವರಾಜ್ ಜಗ್ಗಿ, ವಿಶ್ವನಾಥ ಬಲ್ಲಿದವ, ಮೋಹನ್ ಬಲ್ಲಿದವ್ ಮಲ್ಲಿಕಾರ್ಜುನ ಸಿಂಗ್ರಿ, ಮಲ್ಲಪ್ಪಗೌಡರು ಕ್ರಾಂತಿಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪೊಲೀಸ್ ಇಲಾಖೆಯಿಂದ ರಾಷ್ಟ್ರೀಯ ಏಕತಾ ಓಟ

ಕಾನೂನು ನಮ್ಮನ್ನು ಎಂದಿಗೂ ರಕ್ಷಿಸುತ್ತದೆ. ಮಾನವನ ಪ್ರತಿ ಹಂತದಲ್ಲೂ ಎಲ್ಲಾ ಚಟುವಟಿಕೆಯಲ್ಲೂ ಕಾನೂನಿದೆ. ಇಂತಹ ಕಾನೂನಿನ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಜನರಿಗೆ ಕಾನೂನು ಪಾಲನೆ ಬಗ್ಗೆ ತಿಳಿಸುವ ಮೂಲಕ ಸುಧಾರಿತ ಸಮಾಜ ನಿರ್ಮಾಣ ಮಾಡುವಲ್ಲಿ ಪಾತ್ರ ವಹಿಸಬೇಕು ಎಂದರು.

ಅಮರೇಶ ಹೆಚ್ ಸಿ, ರುದ್ರಗೌಡ ಪಿಸಿ, ಹೋಮ್ ಗಾರ್ಡ್ಸ್ ಸೇರಿದಂತೆ ಆಟೋ ಚಾಲಕರು ಹಾಗೂ ಸಾರ್ವಜನಿಕರಿದ್ದರು.

ಚಾಗಬಾವಿ ಗ್ರಾ.ಪಂ:ನರೇಗಾ ಕೂಲಿಕಾರರಿಗೆ ಆರೋಗ್ಯ ತಪಾಸಣೆ ಶಿಬಿರ

ಕೆಲಸ ಮಾಡಬೇಕು. ನಿಮ್ಮ ಜೊತೆಗೆ ಕುಡಿಯುವ ನೀರಿನ ಬಾಟಲ್ ಇರಬೇಕು.

ಐಇಸಿ ಸಂಯೋಜಕ ರಾಜೇಂದ್ರ ಕುಮಾರ್ ಮಾತನಾಡಿ, ನರೇಗಾ ಯೋಜನೆಯಡಿ ಹೆಣ್ಣು ಮತ್ತು ಗಂಡಿಗೆ ಸಮಾನವಾದ ರೂ 370/- ಕೂಲಿ ಇದೆ. ಪ್ರತಿ ದಿನ ಎರಡು ಬಾರಿ ಹಾಜರಾತಿ ತಪ್ಪದೇ ಹಾಕಬೇಕು ಎಂದರು. ಬಿಸಿಲು ಹೆಚ್ಚು ಇರುವದರಿಂದ ಬೆಳಿಗ್ಗೆ ಬೇಗನೇ ಬಂದು ಕೆಲಸ ಮಾಡುವಂತೆ ತಿಳಿಸಲಾಯಿತು.ಕ್ಷಯ ರೋಗದ ಕುರಿತು ಪರೀಕ್ಷೆ ಮಾಡಲಾಯಿತು.

ಈ ತಪಾಸಣೆಯಲ್ಲಿ ರಕ್ತದ ಒತ್ತಡ, ಶುಗರ್,ರಕ್ತ ಪರೀಕ್ಷೆ, ಇನ್ನು ಮುಂತಾದ ಪರೀಕ್ಷೆಗಳನ್ನು ಏಕ ಕಾಲಕ್ಕೆ ಉಚಿತವಾಗಿ ಸ್ಕ್ರೀನಿಂಗ್ ಟೆಸ್ಟ್ ಮಾಡಲಾಯಿತು.

ಈ ಸಂದರ್ಭದಲ್ಲಿ ಹೆಚ್.ಐ.ಓ ಮಲ್ಲಣ್ಣ ಹೂಗಾರ್, ಸಮುದಾಯ ಆರೋಗ್ಯ ಅಧಿಕಾರಿ ನರೇಂದ್ರ, ಐಇಸಿ ಸಂಯೋಜಕರ ರಾಜೇಂದ್ರ, ಆಶಾ ಕಾರ್ಯಕರ್ತೆ ಶ್ರೀದೇವಿ ಮತ್ತು ಬಿ ಎಫ್ ಟಿ ಮಹಿಬೂಬ್, ಜಿಕೆಎಂ ಶಿವಲೀಲಾ, ಮತ್ತು ಮೇಟ್ ಗಳು ಕೂಲಿಕಾರರು ಸ್ಥಳದಲ್ಲಿದ್ದರು.

ರುದ್ರಪ್ರಯಾಗದಲ್ಲಿ ಭೂಕುಸಿತ, ಕೇದಾರನಾಥ ಯಾತ್ರೆಯ 10,450 ಭಕ್ತರ ರಕ್ಷಣೆ



ಡೆಹ್ರಾಡೂನ್. ಮೇ.21-

ಉತ್ತರಾಖಂಡದ ರುದ್ರ ಪ್ರಯಾಗ ಜಿಲ್ಲೆಯ ಕೇದಾರನಾಥ ಯಾತ್ರಾ ಮಾರ್ಗದಲ್ಲಿ ಸಂಭವಿಸಿದ ಭಾರಿ ಭೂಕುಸಿತದ ಬಳಿಕ ಸಿಲುಕಿದ್ದ 10,450 ಯಾತ್ರಿಕರನ್ನು ಜಂಟಿ ರಕ್ಷಣಾ ತಂಡಗಳು ಸುರಕ್ಷಿತವಾಗಿ ಸ್ಥಳಾಂತರಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಮಂಗಳವಾರ ತಡರಾತ್ರಿ ಪ್ರದೇಶದಲ್ಲಿ ಸುರಿದ ಭಾರಿ ಮಳೆಯ ಪರಿಣಾಮ ಸೋನ್‌ಪ್ರಯಾಗ ಮತ್ತು ಗೌರಿಕುಂಡ್ ನಡುವಿನ ಮುಂಕಟಿಯಾ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿತ್ತು.

ಮಣ್ಣು ಮತ್ತು ಬಂಡೆಗಳು ಮುಖ್ಯ ಹೆದ್ದಾರಿಯನ್ನು ಸಂಪೂರ್ಣವಾಗಿ ಮುಚ್ಚಿದ ಪರಿಣಾಮ ದೊಡ್ಡ ಸಂಖ್ಯೆಯ ಯಾತ್ರಿಕರು ಸಿಲುಕಿಕೊಂಡಿದ್ದರು. ನಿರಂತರ ಬಂಡೆ ಕುಸಿತ, ಭಾರೀ ಮಳೆ, ಕತ್ತಲೆ ಮತ್ತು ದುರ್ಗಮ ಪರ್ವತ ಪ್ರದೇಶದ ಕಾರಣ ಪರಿಸ್ಥಿತಿ ಅತ್ಯಂತ ಸವಾಲಿನದ್ದಾಗಿತ್ತು.

ರುದ್ರಪ್ರಯಾಗ ಜಿಲ್ಲಾ ನಿಯಂತ್ರಣ ಕೊಠಡಿ ರಾತ್ರಿ 9.16ಕ್ಕೆ ರಾಜ್ಯ ವಿಪತ್ತು ಪ್ರತಿಕ್ರಿಯಾ ಪಡೆಗೆ (ಎಸ್‌ಡಿಆರ್‌ಎಫ್) ಮಾಹಿತಿ ನೀಡಿದ್ದು, ಅಗತ್ಯ ಸಾಧನಗಳೊಂದಿಗೆ ಸೋನ್‌ಪ್ರಯಾಗದಿಂದ ರಕ್ಷಣಾ ತಂಡ ತಕ್ಷಣ ಸ್ಥಳಕ್ಕೆ ತೆರಳಿತು.

ನಂತರ ಎಸ್‌ಡಿಆರ್‌ಎಫ್ ಮತ್ತು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ಪಡೆ (ಎನ್‌ಡಿಆರ್‌ಎಫ್) ಜಂಟಿಯಾಗಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಿವೆ. ಜಂಟಿ ತಂಡಗಳು ಸಿಲುಕಿದ್ದ 10,450 ಯಾತ್ರಿಕರನ್ನು ಅಪಾಯದ ಪ್ರದೇಶದಿಂದ ಸುರಕ್ಷಿತವಾಗಿ ಮಾರ್ಗದರ್ಶನ ಮಾಡಿ ಹೊರತೆಗೆದಿವೆ. ನಿರಂತರ ಮಳೆ ಮತ್ತು ಕಡಿಮೆ ಗೋಚರತೆಯ ನಡುವೆಯೂ ರಕ್ಷಣಾ ಸಿಬ್ಬಂದಿ ಯಾತ್ರಿಕರಿಗೆ ಧೈರ್ಯ ತುಂಬಿ ಅವರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡ ನಂತರ ಜೆಸಿಬಿ ಯಂತ್ರಗಳ ಮೂಲಕ ಮಣ್ಣು ಮತ್ತು ಕಲ್ಲುಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಳ್ಳಲಾಗಿದೆ. ಅಧಿಕಾರಿಗಳು ಹೆದ್ದಾರಿಯನ್ನು ಶೀಘ್ರವೇ ಪುನಃ ಸಂಚಾರಕ್ಕೆ ಮುಕ್ತಗೊಳಿಸಿದ್ದು, ವಾಹನ ಸಂಚಾರವನ್ನು ಸಹಜ ಸ್ಥಿತಿಗೆ ತರಲಾಗಿದೆ.

ಎಸ್‌ಡಿಆರ್‌ಎಫ್ ಕಮಾಂಡೆಂಟ್ ಅರ್ಪಣ್ ಯದುವಂಶಿ ಮಾತನಾಡಿ, ಯಾತ್ರಾ ಮಾರ್ಗದಲ್ಲಿ ನಿಯೋಜಿಸಲಾಗಿದ್ದ ತಂಡಗಳು ಮುನ್ನೆಚ್ಚರಿಕೆಯಿಂದ ಕಾರ್ಯನಿರ್ವಹಿಸಿದ್ದರಿಂದ ತ್ವರಿತ ರಕ್ಷಣಾ ಕಾರ್ಯಾಚರಣೆ ಸಾಧ್ಯವಾಯಿತು ಎಂದು ತಿಳಿಸಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಸಮಸ್ಯೆಗಳ ಶೀಘ್ರ ಇತ್ಯರ್ಥಕ್ಕೆ ಆಯೋಗದ ಭರವಸೆ: ಡಾ.ಮೂರ್ತಿ. ಎಲ್

ಬಳ್ಳಾರಿ,ಮೇ 21-

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ರಚನೆಯಾಗಿರುವ ಆಯೋಗವು ಈ ವರ್ಗದ ಜನರ ಸಮಸ್ಯೆಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಅವುಗಳ ಶೀಘ್ರ ಇತ್ಯರ್ಥಕ್ಕೆ ಬದ್ಧವಾಗಿದೆ ಎಂದು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ. ಎಲ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ನಗರದ ಜಿಪಂ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರೊಂದಿಗೆ ಕುಂದುಕೊರತೆಗಳ ಸಭೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆಯೋಗವು ಈಗಾಗಲೇ ರಾಜ್ಯದ ಸುಮಾರು 15 ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಸ್ಥಳೀಯ ಪರಿಸ್ಥಿತಿಯನ್ನು ಪರಿಶೀಲಿಸಿದೆ. ಇದರೊಂದಿಗೆ, ಪ್ರತಿ ಗುರುವಾರ ಮತ್ತು ಶುಕ್ರವಾರದಂದು ಸಾರ್ವಜನಿಕರಿಂದ ಸ್ವೀಕರಿಸಲಾಗುವ ಅಹವಾಲುಗಳನ್ನು ಆಲಿಸಿ, ಕೋರ್ಟ್ ಮತ್ತು ಕಚೇರಿ ಪ್ರಕ್ರಿಯೆಗಳ ಮೂಲಕ ಸುಮಾರು 800 ಕ್ಕೂ ಹೆಚ್ಚು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಆಯೋಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸೇರಿದ ಜನರ ನೂರಾರು ಸಮಸ್ಯೆಗಳಿಗೆ ಸಂಬಂಧಿಸಿದಂತೆ ಒಟ್ಟು 4,250 ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಕಾನೂನು ಪ್ರಕ್ರಿಯೆಯ ವಿವಿಧ ಹಂತಗಳಲ್ಲಿವೆ. ಇದರ ಜೊತೆಗೆ ದಿನನಿತ್ಯ ಹೊಸ ದೂರುಗಳು ಕೂಡ ಆಯೋಗಕ್ಕೆ ಬರುತ್ತಿವೆ ಎಂದು ತಿಳಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಲು ಪ್ರತಿ ಜಿಲ್ಲೆಯಲ್ಲೂ ಆಯೋಗವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಸಾರ್ವಜನಿಕರು ನೀಡುವ ದೂರುಗಳ ಆಧಾರದ ಮೇಲೆ ಸ್ಥಳದಲ್ಲೇ ಅಧಿಕಾರಿಗಳಿಂದ ವಿವರಣೆ ಕೇಳಿ, ಸೂಕ್ತ ಕ್ರಮ ಜರುಗಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದವರು ತಮ್ಮ ಗಂಭೀರವಾದ ಸಮಸ್ಯೆಗಳನ್ನು ಮಾತ್ರ ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಆಯೋಗದ ಗಮನಕ್ಕೆ ತರಬೇಕು. ಅರ್ಜಿದಾರರು ತಮ್ಮ ಸಮಸ್ಯೆಗಳನ್ನು ಲಿಖಿತ ರೂಪದಲ್ಲಿ ಅಹವಾಲುಗಳನ್ನು ಸಲ್ಲಿಸಿದಲ್ಲಿ, ಪ್ರತಿಯೊಬ್ಬರ ಸಮಸ್ಯೆಗೂ ಸೂಕ್ತ ಸ್ಪಂದನೆ ಸಿಗಲಿದೆ ಎಂದು ಭರವಸೆ ನೀಡಿದರು.

ಇಂದಿನ ಸಭೆಗಳಲ್ಲಿ ಸ್ವೀಕರಿಸಲಾದ ದೂರು, ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿ ಇವುಗಳಿಗೆ ಸೂಕ್ತ ಪರಿಹಾರವನ್ನು ತ್ವರಿತವಾಗಿ ಒದಗಿಸಲಾಗುವುದು ಅಲ್ಲದೇ ವಿವಿಧ ಜಿಲ್ಲೆಗಳಲ್ಲಿ ಆಲಿಸಿದ ಹಾಗೂ ಸ್ವೀಕರಿಸಲಾದ ಅಹವಾಲುಗಳ ಕುರಿತ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಮುಖಂಡರು ಶಿಕ್ಷಣ, ಸುಸಜ್ಜಿತ ವಸತಿ ನಿಲಯ, ಅತ್ಯಾಧುನಿಕ ಗ್ರಂಥಾಲಯ ನಿರ್ಮಾಣ ಬೇಡಿಕೆ, ಆರೋಗ್ಯ ಸೇವೆ, ಸಮುದಾಯದ ವಾರ್ಡ್ ಗಳಲ್ಲಿ ಮೂಲಭೂತ ಸೌಕರ್ಯಗಳ ಬೇಡಿಕೆ, ಭೂಮಿ ಮಂಜೂರು ಸೇರಿದಂತೆ ವಿವಿಧ ಅಹವಾಲುಗಳನ್ನು ಆಯೋಗದ ಅಧ್ಯಕ್ಷರಿಗೆ ಸಲ್ಲಿಸಿದರು.

ಇದಕ್ಕೂ ಮುನ್ನ ಗಣ್ಯರು ಡಾ.ಬಿ.ಆರ್. ಅಂಬೇಡ್ಕರ್, ಡಾ.ಬಾಬು ಜಗಜೀವನ್ ರಾಮ್, ಮಹರ್ಷಿ ವಾಲ್ಮೀಕಿ ಮಹನೀಯರಿಗೆ ಪುಷ್ಪನಮನ ಸಲ್ಲಿಸಿದರು. ಬಳಿಕ ಸಂವಿಧಾನ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು.

ಸಭೆಯಲ್ಲಿ ಆಯೋಗದ ಸದಸ್ಯರುಗಳಾದ ದಿವಾಕರ.ಎನ್., ಗೀತಾ ಥಾವಂಶಿ, ಕಾರ್ಯದರ್ಶಿ ಡಾ.ಶಿವರಾಮು ಹೆಚ್.ಎಸ್. ಸಂಶೋಧನಾ ಅಧಿಕಾರಿ ಸಿಂಘು ರಘು ಹೆಚ್.ಎಸ್., ಡಾ.ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆ ಆಯುಕ್ತ ಪಿ.ಗಾದೆಪ್ಪ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಮಹಾನಗರ ಪಾಲಿಕೆಯ ಆಯುಕ್ತ ಪಿ.ಎಸ್. ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿ ಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಇನ್ನಿತರರು ಇದ್ದರು.

ಸುಸ್ಥಿರ ಕೃಷಿಗೆ ಮಣ್ಣಿನ ಆರೋಗ್ಯ ಅವಶ್ಯಕ: ಡಾ.ಬಿ. ಕೃಷ್ಣರಾವ್

ಬಳ್ಳಾರಿ,ಮೇ 21-

ಮಣ್ಣಿನ ಆರೋಗ್ಯವನ್ನು ಸುಧಾರಿಸಲು ಹಸಿರು ಗೊಬ್ಬರ, ಕೊಟ್ಟಿಗೆ ಗೊಬ್ಬರ ಹಾಗೂ ಕೆರೆಯ ಹೂಳಿನ ಬಳಕೆ ಅತ್ಯಂತ ಅವಶ್ಯಕ ಎಂದು ಐಸಿಎಆರ್ - ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಮುಖ್ಯಸ್ಥ ಡಾ.ಬಿ. ಕೃಷ್ಣರಾವ್ ಅವರು ಹೇಳಿದರು.

ಐಸಿಎಆರ್ - ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ ವತಿಯಿಂದ 'ಮೇರಾ ಗಾಂವ್ ಮೇರಾ ಗೌರವ್' ಕಾರ್ಯಕ್ರಮದಡಿ, ಇಫ್ಕೋ ಸಹಯೋಗದೊಂದಿಗೆ 'ಸ್ಮಾರ್ಟ್ ರಸಗೊಬ್ಬರ ಬಳಕೆ, ಪೋಷಕಾಂಶ

ಬಳಕೆ ದಕ್ಷತೆ ಮತ್ತು ಮಣ್ಣಿನ ಆರೋಗ್ಯ ನಿರ್ವಹಣೆ' ಕುರಿತು ಬಳ್ಳಾರಿ ತಾಲ್ಲೂಕಿನ ಬಿ.ಬೆಳ ಗಲ್ ತಾಂಡಾದಲ್ಲಿ ಬುಧವಾರ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮತೋಲಿತ ರಸಗೊಬ್ಬರ ಬಳಕೆ, ನೈಸರ್ಗಿಕ ಹಾಗೂ ಸಾವಯವ ಕೃಷಿ ಪದ್ಧತಿಗಳು, ದನ ಹಾಗೂ ಆಡು ಸಾಕಣೆ ಮತ್ತು ತರಕಾರಿ ಬೆಳೆಗಳ ಮಹತ್ವದ ಅರಿವು ಹೊಂದಬೇಕು ಎಂದರು. ಮಣ್ಣು ವಿಭಾಗದ ಹಿರಿಯ ವಿಜ್ಞಾನಿ ಡಾ. ಮಹಿಪಾಲ್



ಚೌಧರಿ ಅವರು ಮಾತನಾಡಿ, ಸುಸ್ಥಿರ ಕೃಷಿ ಗಾಗಿ ಸರಿಯಾದ ಸಮಯ ಮತ್ತು ನಿಖರ ಪ್ರಮಾಣದಲ್ಲಿ ರಸಗೊಬ್ಬರ ಗಳನ್ನು ಬಳಸಬೇಕು. ಬೇವು ಲೇಪಿತ ಯೂರಿಯಾ ಹಾಗೂ ಗಂಧಕ ಲೇಪಿತ ಯೂರಿಯಾದಂತಹ ನಿಧಾನವಾಗಿ ಬಿಡುಗಡೆ ಯಾಗುವ ರಸ ಗೊಬ್ಬರಗಳ ಬಳಕೆಗೆ ಉತ್ತೇಜನ ನೀಡಬೇಕು ಎಂದು ತಿಳಿಸಿ ದರು. ಹಣ್ಣು ವಿಭಾಗದ ವಿಜ್ಞಾನಿ ಅನುಷಾ ಎನ್. ಎಂ.

ಅವರು ಮಾತ ನಾಡಿ, ಮಣ್ಣಿನ ಪರೀಕ್ಷಾ ವರದಿಯ ಆಧಾರದ ಮೇಲೆಯೇ ರಸಗೊಬ್ಬ ರಗಳನ್ನು ಬಳಸುವುದರಿಂದ ಕೃಷಿ ವೆಚ್ಚ ಕಡಿಮೆಯಾಗಿ, ಹೆಚ್ಚಿನ ಉತ್ಪಾದನೆ ಮತ್ತು ಉತ್ತಮ ಲಾಭ ಪಡೆಯಬಹುದು ಎಂದು ಅವರು ರೈತರಿಗೆ ಸಲಹೆ ನೀಡಿದರು. ಇಡೀ ವೇಳೆ ಮಣ್ಣಿನ ಮಾದರಿಯನ್ನು ಸಂಗ್ರಹಿಸುವ ಸರಿಯಾದ ವೈಜ್ಞಾನಿಕ ವಿಧಾನವನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಬಳ್ಳಾರಿ ಇಫ್ಕೋ ಮಾರ್ಕೆಟಿಂಗ್ ಮ್ಯಾನೇಜರ್ ಹನುಮಂತ್ ಅವರು ಮಾತನಾಡಿ, ನಿಯಂತ್ರಿತ ಬಿಡುಗಡೆ ರಸಗೊಬ್ಬರಗಳಾದ ಬೇವು ಲೇಪಿತ ಯೂರಿಯಾ ಮತ್ತು ನ್ಯಾನೋ ರಸಗೊಬ್ಬರಗಳ ಪ್ರಯೋಜನಗಳನ್ನು ರೈತರಿಗೆ ಮನವರಿಕೆ ಮಾಡಿಕೊಟ್ಟರು.

ಇದೇ ಸಂದರ್ಭದಲ್ಲಿ ಇಫ್ಕೋ ಉತ್ಪನ್ನಗಳ ಪ್ರದರ್ಶನ ಹಾಗೂ ಡ್ರೋನ್ ಮೂಲಕ ರಸಗೊಬ್ಬರ ಸಿಂಪಡಿಸುವ ಅತ್ಯಾಧುನಿಕ ತಂತ್ರಜ್ಞಾನದ ಪ್ರಾತ್ಯಕ್ಷಿಕೆಯನ್ನು ನಡೆಸಲಾಯಿತು. ಡ್ರೋನ್ ತಂತ್ರಜ್ಞಾನದ ಬಳಕೆಯಿಂದ ಸಮಯ, ಕಾರ್ಮಿಕ ವೆಚ್ಚ ಹಾಗೂ ರಸಗೊಬ್ಬರದ ವ್ಯರ್ಥ ಬಳಕೆ ತಗ್ಗುವುದರ ಜೊತೆಗೆ, ನಿಖರವಾಗಿ ಮತ್ತು ಸರಿಯಾದ ಸಮಯದಲ್ಲಿ ಸಿಂಪಡಣೆ ಮಾಡಲು ಸಾಧ್ಯವಾಗುತ್ತದೆ ಎಂದು ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳಾ ಮತ್ತು ಪುರುಷ ರೈತರು, ಮಣ್ಣಿನ ಆರೋಗ್ಯದ ಸುಧಾರಣೆ, ಸಮತೋಲನಿತ ರಸಗೊಬ್ಬರ ಹಾಗೂ ನಿಯಂತ್ರಿತ ಬಿಡುಗಡೆ ರಸಗೊಬ್ಬರಗಳ ಬಳಕೆಯ ಮೂಲಕ ಕೃಷಿಯಲ್ಲಿ ದಕ್ಷತೆ ಮತ್ತು ಲಾಭದಾಯಕತೆಯನ್ನು ಹೇಗೆ ಹೆಚ್ಚಿಸಿಕೊಳ್ಳಬಹುದು ಎಂಬ ಕುರಿತು ಮಾಹಿತಿ ಪಡೆದುಕೊಂಡರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ: ವೇಳಾಪಟ್ಟಿ ಬಿಡುಗಡೆ

ಬೀದರ, ಮೇ.20-

ಭಾರತ ಚುನಾವಣಾ ಆಯೋಗ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದಂತೆ ಬೀದರ ಜಿಲ್ಲೆಯಲ್ಲಿ 2026ರ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಸಂಬಂಧಿಸಿದ ಅಧಿಕೃತ ವೇಳಾಪಟ್ಟಿಯನ್ನು ಬಿಡು ಗಡೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿ ಕಾರಿಗಳು ಪ್ರಕಟಣೆಯಲ್ಲಿ ತಿಳಿಸಿ ದ್ದಾರೆ.

ಮತದಾರರ ಪರಿಶೀಲನಾ ಕಾರ್ಯಕ್ರಮದ ವೇಳಾಪಟ್ಟಿ ವಿವರ: ಎಸ್.ಐ.ಆರ್. ಅರ್ಹತಾ ದಿನಾಂಕ: 01-10-2026 ತರಬೇತಿ ಮತ್ತು ಮುದ್ರಣ ತಯ್ಯಾರಿ ದಿ: 20-06-2026 ರಿಂದ 29-06-2026 ರವರೆಗೆ , ಬಿ.ಎಲ್.ಓ.ಗಳಿಂದ ಮನೆ ಮನೆ ಭೇಟಿ ದಿ: 30-06 -2026 ರಿಂದ 29-07-2026 , ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ ದಿ: 29-07-2026 , ಕರಡು ಮತದಾರರ ಪಟ್ಟಿ ದಿ: 05-08-2026 ,

ಶಶಿಧರ ಕುರೇರ್ ಅವರಿಗೆ ಅದ್ದೂರಿ ಬೀಳ್ಕೊಡುಗೆ

ಜಿಲ್ಲೆಯ ಜನರ ಪ್ರೀತಿ, ವಿಶ್ವಾಸ ಎಂದಿಗೂ ಮರೆಯಲಾಗದು



ಬಾಗಲಕೋಟೆ, ಮೇ 21-

ಜಿಲ್ಲೆಯ ಅಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಳ್ಳಲು ಸಹಕರಿಸಿದ ಜನಪ್ರತಿನಿಧಿಗಳು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಜಿಲ್ಲೆಯ ಜನರ ಪ್ರೀತಿ, ವಿಶ್ವಾಸ ಹಾಗೂ ಸಹೋದ್ಯೋಗಿಗಳ ಬೆಂಬಲ ಎಂದಿಗೂ ಮರೆಯಲಾಗದು ಎಂದು ನಿಕಟಪೂರ್ವ ಜಿ.ಪಂ ಸಿಇಓ ಶಶಿಧರ ಕುರೇರ ಹೇಳಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಮಂಗಳವಾರ ಸಂಜೆ ಜರುಗಿದ ಬೀಳ್ಕೊಡುಗೆ ಸಮಾರಂಭದಲ್ಲಿ ಆತ್ಮೀಯ ಸನ್ಮಾನವನ್ನು ಸ್ವೀಕರಿಸಿ, ಮಾತನಾಡಿದ ಅವರು ಬಾಗಲಕೋಟೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರದ ಹುದ್ದೆಯನ್ನು ವಹಿಸಿಕೊಂಡಾಗ ನನ್ನ ಮೇಲೆ ಗುರುತರವಾದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಇತ್ತು. ಆದರೆ ಇಲ್ಲಿನ ಜನಪ್ರತಿನಿಧಿಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಗಳ ಸಹಕಾರದಿಂದ ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಯಿತು. ಪ್ರತಿಯೊಂದು ಯಶಸ್ಸಿನ ಹಿಂದೆ ಎಲ್ಲರ ಶ್ರಮ ಇರುತ್ತದೆ ಎಂದು ತಿಳಿಸಿದರು.

ಸರಕಾರಿ ಸೇವೆಗೆ ಸೇರಿದ ಬಳಿಕ ಸಮಾಜಕ್ಕೆ ಉತ್ತಮ ಸೇವೆ ನೀಡುವುದು ತಮ್ಮ ಜವಾಬ್ದಾರಿ. ಇದನ್ನು ಅರಿತು ನಾವು ಕೆಲಸ ಮಾಡಬೇಕಾಗುತ್ತದೆ. ಜಿಲ್ಲೆಯ ಅಭಿವೃದ್ಧಿ ಹಿನ್ನಲೆಯಲ್ಲಿ ಈ ಹಿಂದಿನ ಹಾಗೂ ಇಂದಿನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಜೊತೆಯಾಗಿ ಕೆಲಸ ಮಾಡಿದ್ದೇನೆ. ಎಲ್ಲರೂ ಸಹಕಾರ ಕೊಟ್ಟಿದ್ದರಿಂದ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು. ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ದೊರೆತ ಪ್ರತಿಯೊಂದು ಪ್ರಶಸ್ತಿಗಳು ಕೇಲವ ನಮ್ಮ ಶ್ರಮವಲ್ಲ. ಇದಕ್ಕೆ ಶ್ರಮಿಸಿದ ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳ ಶ್ರಮವಿದೆ ಎಂದರು.

ಮುಖ್ಯವಾಗಿ ನನ್ನ ಮನಸ್ಸಿಗೆ ಹತ್ತಿರವಾದ ವಿಷಯವೆಂದರೆ, ಒಂದು ಶಿಕ್ಷಣ ಮತ್ತು ಇನ್ನೊಂದು ಕುಡಿಯುವ ನೀರು. ಹಲವಾರು ಯೋಜನೆಗಳು ರೂಪಿಸುವ ಮೂಲಕ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ. ಇದರ ಜೊತೆಗೆ ಗ್ರಾಮೀಣ ಭಾಗದಲ್ಲಿ ದಿನ 24 ಗಂಟೆಗಳ ಕಾಲ ನೀರು ಪೂರೈಸುವ ಕೆಲಸ ಮಾಡಲಾಗಿದ್ದು, ಕೆಲವು ಗ್ರಾಮಗಳಲ್ಲಿ ಯಶಸ್ಸು ಕಂಡುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಪ್ರತಿಯೊಂದು ಗ್ರಾಮಕ್ಕೂ ವಿಸ್ತರಿಸಿ ಯಶಸ್ಸನ್ನು ಮುಂದುವರಿಸಿಕೊಂಡು ಹೋಗಬೇಕು. ಇದರ ಜೊತೆಗೆ ಶಿಸ್ತುಬದ್ದ ಕಚೇರಿ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಅವರು ಮಾಡಿದ ಕಾರ್ಯಗಳು ಶ್ಲಾಘನೀಯವಾಗಿದ್ದು, ಜಿಲ್ಲಾಡಳಿತ ಜೊತೆಗೆ ಉತ್ತಮವಾಗಿ ಕೆಲಸ ಮಾಡಿ ಸಲಹೆ ನೀಡಿದ್ದಾರೆ. ಅಭಿವೃದ್ದಿಗೆ ಅವರ ನೀಡಿದ ಮಾರ್ಗದರ್ಶನ ಹಾಗೂ ಆಡಳಿತದ ಶೈಲಿ ಸದಾ ಸ್ಮರಣೀಯವಾಗಿರಲಿ ಎಂದು ಅಭಿಪ್ರಾಯ ಪಟ್ಟರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಯುಕೆಪಿ ಜಿಎಂ ಗಜಾನನ ಬಾಲೆ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ ಸೇರಿದಂತೆ ಇತರೆ ಅಧಿಕಾರಿಗಳು ಶಶಿಧರ ಕುರೇರ ಅವರ ಆಡಳಿತಾತ್ಮಕ ಸೇವೆ, ಅಭಿವೃದ್ದಿ ಯೋಜನೆಗಳ ಅನುಷ್ಠಾನ ಮತ್ತು ಜನಪರ ಕಾರ್ಯಗಳನ್ನು ಸ್ಮರಿಸಿದರು.

ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಶಶಿಧರ ಕುರೇರ್ ಅವರು ಮೂರು ವರ್ಷಗಳ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಸ್ಮರಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಸೇರಿದಂತೆ ಜಿ.ಪಂ ವ್ಯಾಪ್ತಿಯ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮೆರವಣಿಗೆ ಮೂಲಕ ಅದ್ದೂರಿ ಸ್ವಾಗತ ನಿಕಟಪೂರ್ವ ಜಿ.ಪಂ ಸಿಇಓ ಶಶಿಧರ ಕುರೇರ್‌ವರ ಪತ್ನಿಯ ಸಮೇತ ಜಿಲ್ಲಾಡಳಿತ ಭವನದ ಆವರಣದಿಂದ ತೆರೆದ ವಾಹನದಲ್ಲಿ ಅದ್ದೂರಿ ಮೆರವಣಿಗೆ ಮೂಲಕ ಜಿ.ಪಂ ನೂತನ ಸಭಾಭವನಕ್ಕೆ ಕರೆತೆರಲಾಯಿತು. ಹಾದಿಯಿದ್ದಕ್ಕೂ ಹೂವಿನ ಮಳೆಗರೆದು, ಕರತಾಡನದ ಮೂಲಕ ಆತ್ಮೀಯ ಸ್ವಾಗತ ಕೋರಲಾಯಿತು.

ಜಿ.ಪಂ ಸಭಾಭವನವನ್ನು ಮಧುವನ ಗಿತ್ತಿಯಂತೆ ಶೃಂಗಾರಗೊಳಿ ಸಲಾಗಿತ್ತು. ಹೂವಿನ ಅಲಂಕಾರ, ಬಣ್ಣ ಬಣ್ಣದ ದೀಪಾಲಂಕಾರದಿಂದ ಸಿಂಗರಿಸಲಾದ ಜಿ.ಪಂ ಸಭಾಭವನ ಎಲ್ಲರ ಗಮನ ಸೆಳೆಯಿತು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಿಡದಿ ಟೌನ್ ಶಿಪ್ ಯೋಜನೆ ಹಿಂದೆ ರಿಯಲ್ ಎಸ್ಟೇಟ್ ವ್ಯವಹಾರದ ದಂಧೆ?

ಈ ಉದ್ದೇಶಿತ ಟೌನ್ ಶಿಪ್ ಯೋಜನೆಯ ಸುತ್ತಮುತ್ತ ಭೂಸ್ವಾಧೀನಕ್ಕೆ ಒಳಪಡದ ಜಮೀನುಗಳ ಬೆಲೆ ಹಠಾತ್ತನೆ ಎಕರೆಗೆ ಐದು ಕೋಟಿ ರುಪಾಯಿಗೆ ಜಿಗಿದಿದೆ. ಭೂಸ್ವಾಧೀನ ಅಧಿಸೂಚನೆಯ ನಿರೀಕ್ಷೆಯಲ್ಲಿ ಎಕರೆಗೆ ಐದು ಕೋಟಿ ರುಪಾಯಿಯಂತೆ ಸುಮಾರು 586 ಎಕರೆ ಕ್ರಯವಿಕ್ರಯ ವ್ಯವಹಾರ ಜರುಗಿರುವ ಸೂಚನೆಗಳಿವೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅತ್ಯಂತ ಆಸ್ಥೆ ವಹಿಸಿರುವ ಬಿಡದಿ ಟೌನ್ ಶಿಪ್ ಯೋಜನೆಯು ರೈತರು ಮತ್ತು ರಾಜಕೀಯ ವಿರೋಧಿಗಳಿಂದ ತೀವ್ರ ಆಕ್ಷೇಪ ಎದುರಿಸಿದೆ. ವಿವಾದದ ಸ್ವರೂಪ ತಳೆಯುತ್ತಲಿದೆ. ರಾಜಕೀಯ ಕೆಸರೆರಚಾಟ ನಡೆದಿದೆ.

ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳದ ಹಾಲಿ ಮತ್ತು ಮಾಜಿ ಪಾಳೆಯಪಟ್ಟುಗಳಲ್ಲಿ ನಡೆದಿರುವ ಮುಸುಕಿನ ಯುದ್ಧಗಳಲ್ಲಿ ಬಿಡದಿ ಟೌನ್ ಶಿಪ್ ಯೋಜನೆಯೂ ಸೇರಿದೆ. ಈ ಯೋಜನೆಯಲ್ಲಿ ವ್ಯಕ್ತಿಗತ ಹಿತಾಸಕ್ತಿಗಳು ಮತ್ತು ಭಾರೀ ದಂಧೆಯ ವಾಸನೆ ಬಡಿದಿದೆ.

ರೈತರಿಗೆ ಅನ್ಯಾಯವಾಗುತ್ತಿದೆ ಎಂಬುದಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಎತ್ತಿದ್ದಾರೆ. ಈ ಹಿಂದೆ ತಾವು ಮುಖ್ಯಮಂತ್ರಿ ಆಗಿದ್ದಾಗ ಎಚ್.ಡಿ.ಕುಮಾರಸ್ವಾಮಿ ಕೂಡ ಬಿಡದಿ ಟೌನ್ ಯೋಜನೆಗೆ ಮುಂದಡಿ ಇಟ್ಟಿದ್ದುಂಟು. ಕಾಂಗ್ರೆಸ್ಸಿನವರು ಸತ್ಯಶೋಧನಾ ವರದಿ ತಂದು ಅಡ್ಡಿಪಡಿಸಿದರು ಎಂದು ದೇವೇಗೌಡರು ಹೇಳಿದ್ದಾರೆ.

ಬೆಂಗಳೂರು ವಾಹನ ದಟ್ಟಣೆ ಕಡಿಮೆ ಮಾಡಬೇಕೆಂದು ಕುಮಾರಸ್ವಾಮಿ ಐದು ಟೌನ್‌ಶಿಪ್ ಮಾಡಲು ತೀರ್ಮಾನ ಮಾಡಿದ್ದರು. ಮಾಗಡಿ, ಹೊಸಕೋಟೆ ಸೇರಿದಂತೆ ಬೆಂಗಳೂರು ಅಕ್ಕಪಕ್ಕದಲ್ಲಿ ಟೌನ್‌ಶಿಪ್ ಮಾಡಲು ಮುಂದಾದರು. ಬಿಡದಿ ಟೌನ್‌ಶಿಪ್‌ಗೆ 400 ಕೋಟಿ ರೂಪಾಯಿ ಠೇವಣಿ ಕೂಡ ಇಡಲಾಗಿತ್ತು. ಪ್ರಾಜೆಕ್ಟ್ ಸಲ್ಲಿಕೆಯೂ ಆಗಿತ್ತು. ಆದರೆ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ಎಂದು ಮಾಡಿ ಜನರನ್ನು ಎತ್ತಿಕಟ್ಟಿದ್ರು ಟೌನ್‌ಶಿಪ್ ಜಾಗವನ್ನು ಕುಮಾರಸ್ವಾಮಿ ಹೊಡೆಯಲು ಹೊರಟಿದ್ದಾರೆ ಅಂತ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ರಚನೆ ಮಾಡಿತು. ನಿಮ್ಮ ಭೂಮಿ ಕಬಳಿಸ್ತಾನೆ ಅಂತ ಜನರನ್ನು ಎತ್ತಿಕಟ್ಟಿದ್ರು. ರೈತರು ಹಾಗೂ ಸಾರ್ವಜನಿಕ ವಿರೋಧ ಬಂದ ಹಿನ್ನೆಲೆ ಕುಮಾರಸ್ವಾಮಿ ಐದು ಟೌನ್‌ಶಿಪ್ ಯೋಜನೆ ಕೈಬಿಟ್ಟರು. ಗೆಜೆಟ್ ನೋಟಿಫಿಕೇಶನ್ ಮಾಡಿ ಭೂಮಿ ಖರೀದಿ ಕೈಬಿಟ್ಟರು ಎಂಬ ದೊಡ್ಡಗೌಡರ ಕುದಿಯ ಹಿಂದಿನ ಮರ್ಮವೇನು?

ಈಗಿನ ಕಾಂಗ್ರೆಸ್ ಸರ್ಕಾರ ಮಾಡ್ತಿರೋದು ಏನು? ಅಂದು ರೈತರ ಭೂಮಿ ಕಬಳಿಸ್ತಾರೆ ಅಂದವರು ಈಗ ರೈತರ ಭೂಮಿಯನ್ನ ಕಬಳಿಸ್ತಿದರಲ್ಲವಾ? ಈಗ ಬೆಂಗಳೂರು ಜವಾಬ್ದಾರಿ, ನೀರಾವರಿ ಇಲಾಖೆ ಜವಾಬ್ದಾರಿ, ರಾಷ್ಟ್ರೀಯ ಪಕ್ಷದ ಅಧ್ಯಕ್ಷರ ಜವಾಬ್ದಾರಿ ಹೊತ್ತಿರುವ ಸಂದರ್ಭದಲ್ಲಿ ಸಿಎಂ ಆಗಬೇಕು ಅಂತ ಒಡಂಬಡಿಕೆ ಆಗಿದೆ ಎಂದು ಮನರಂಜನೆ ಕಾರ್ಯಕ್ರಮ ಮಾಡ್ತಿದ್ದಾರೆ ಎಂಬ ಅವರ ಮಾತುಗಳ ಹಿಂದಿನ ಅರ್ಥವನ್ನು ಗ್ರಹಿಸಬೇಕಿದೆ.

ರೈತರು ಕಲ್ಲೇಟು ಹೊಡೆದರೂ, ಅಂಗಿ ಹರಿದರೂ ಈ ಟೌನ್ ಶಿಪ್ ಯೋಜನೆಯನ್ನು ನಾನು ಕೈಬಿಡುವುದಿಲ್ಲ ಎಂಬ ಉಪಮುಖ್ಯಮಂತ್ರಿಯವರ ದೃಢಸಂಕಲ್ಪದ ಒಳಾರ್ಥವೇನೆಂದು ಪ್ರಶ್ನಿಸಬೇಕಿದೆ.

ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ರೈತರು, ಕಳೆದ ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ಬೈರಮಂಗಲ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ಮುಂದುವರಿಸಿದ್ದಾರೆ.

ಫಲವತ್ತಾದ ಕೃಷಿ ಭೂಮಿಯನ್ನು ನಾಶ ಮಾಡಿ ನಿರ್ಮಿಸಲು ಉದ್ದೇಶಿಸಿರುವ ಬಿಡದಿ ಟೌನ್ ಶಿಪ್ ಯೋಜನೆ ರೈತ ವಿರೋಧಿ ಹಾಗೂ ಜೀವ ಪರಿಸರ ವ್ಯವಸ್ಥೆಗೆ ವಿನಾಶಕಾರಿ ಯೋಜನೆಗೆ ನೀಡಿರುವ ಸಂಪುಟ ಅನುಮೋದನೆಯನ್ನು ರಾಜ್ಯ ಸರಕಾರ ವಾಪಸ್ ಪಡೆಯಬೇಕು ಮತ್ತು ಸುಮಾರು 9,640 ಎಕರೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು ಎಂದು ಸಂಯುಕ್ತ ಹೋರಾಟ ಕರ್ನಾಟಕ ಆಗ್ರಹಿಸಿದೆ.

ರಾಮನಗರ ಜಿಲ್ಲೆ ಬಿಡದಿ ಹೋಬಳಿ ಬೈರಮಂಗಲ ಹಾಗೂ ಕಂಚುಗಾರನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ 25 ಗ್ರಾಮಗಳ ಸುಮಾರು 9,640 ಎಕರೆ ಕೃಷಿ ಭೂಮಿಯು ನೀರಾವರಿ ಹೊಂದಿರುವ ತೆಂಗು, ಅಡಿಕೆ, ಬಾಳೆ, ಮಾವು ಸೇರಿದಂತೆ ವಿವಿಧ ರೀತಿಯ ತೋಟಗಾರಿಕೆ ಬೆಳೆಗಳನ್ನು, ಬೆಳೆಯುತ್ತಿರುವ ಸಮೃದ್ಧ ಹಸಿರು ಪ್ರದೇಶವಾಗಿದೆ ಎಂಬುದು ವಾಸ್ತವಾಂಶ.

ಸಂಯುಕ್ತ ಹೋರಾಟ ಕರ್ನಾಟಕ ಪದಾಧಿಕಾರಿಗಳಾದ ಬಡಗಲಪುರ ನಾಗೇಂದ್ರ, ಸಿದ್ದನಗೌಡ ಪಾಟೀಲ, ನೂರ್ ಶ್ರೀಧರ್, ಟಿ.ಯಶವಂತ, ಪಿ.ಪಿ.ಅಪ್ಪಣ್ಣ, ಪ್ರಕಾಶ್ ಸೇರಿದಂತೆ ರೈತ ಮುಂದಾಳುಗಳು-ಹೋರಾಟಗಾರರು ಈ ಭೂಸ್ವಾಧೀನದ ತೀರ್ಮಾನವನ್ನು ತಕ್ಷಣವೇ ವಾಪಸು ಪಡೆಯುವ ಬೇಡಿಕೆ ಇಟ್ಟಿದ್ದಾರೆ.

ಈ ಪ್ರದೇಶವು ಜಿಬಿಎ ಗಡಿಗೆ ಹೊಂದಿಕೊಂಡಂತೆ ಇದ್ದು ಬೆಂಗಳೂರು ಮಹಾನಗರಕ್ಕೆ ಹಾಲು, ಹಣ್ಣು, ತರಕಾರಿ ಮುಂತಾದ ದಿನನಿತ್ಯದ ಅಗತ್ಯಗಳನ್ನು ಪೂರೈಸುವ ಅಮೂಲ್ಯ ಆಹಾರದ ಕಣಜವಾಗಿದೆ. ಇಲ್ಲಿನ ಎಲ್ಲ ಕೃಷಿ ಕುಟುಂಬಗಳು ತಮ್ಮ ಸಣ್ಣ ಹಿಡುವಳಿಯಲ್ಲೇ ಮಿಶ್ರ ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡು ಅಡಿಕೆ ತಟ್ಟೆ ತಯಾರಿಕೆ ಮುಂತಾದ ಕೃಷಿ ಆಧಾರಿತ ಸಣ್ಣ ಉದ್ದಿಮೆಗಳನ್ನು ಕಟ್ಟಿಕೊಂಡು ಉತ್ತಮ ಮಾರುಕಟ್ಟೆಯನ್ನು ಕಂಡುಕೊಂಡಿದ್ದಾರೆ. ಇಂತಹ ಸುಸ್ಥಿರ ಬದುಕಿನ ಮೇಲೆ ಬಲವಂತ ಹಾಗೂ ಅನ್ಯಾಯದ ಭೂ ಸ್ವಾಧೀನವನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎನ್ನುತ್ತಾರೆ ಹೋರಾಟಗಾರರು.

ಜಿಬಿಎ ಅನುಷ್ಠಾನಗೊಳಿಸುತ್ತಿರುವ ಬಿಡದಿ ಸಮಗ್ರ ಉಪ ನಗರ ಯೋಜನೆಗಾಗಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987ರ ಕಲಂ 17(1)ರ ಅಡಿಯಲ್ಲಿ 2025ರ ಮಾ.13 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ತಕ್ಷಣವೇ ಸುಮಾರು 3,500ಕ್ಕೂ ಹೆಚ್ಚು ಸಣ್ಣ ಮತ್ತು ಅತಿ ಸಣ್ಣ ರೈತರು ಈ ಭೂ ಸ್ವಾಧೀನಕ್ಕೆ ಒಪ್ಪಿಗೆ ಇಲ್ಲ ಎಂದು ಲಿಖಿತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಇದುವರೆಗೂ ಈ ಯಾವ ರೈತರ ಆಕ್ಷೇಪಣೆಗಳನ್ನು ಸರಕಾರ ಆಲಿಸಿಲ್ಲ ಎಂಬುದು ಅವರ ಆಕ್ರೋಶ.

ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ ತಾಲ್ಲೂಕಿನ ಒಂಬತ್ತು ಗ್ರಾಮಗಳ ಸುಮಾರು 7,481 ಎಕರೆ 21.08 ಗುಂಟೆ ಪ್ರದೇಶ ಈ ಯೋಜನೆಯ ವ್ಯಾಪ್ತಿಗೆ ತುತ್ತಾಗಲಿದೆ. ಕೈಗಾರಿಕೆ, ವಾಣಿಜ್ಯ ಹಾಗೂ ವಸತಿ ಸಮುಚ್ಚಯಗಳನ್ನು ಒಳಗೊಳ್ಳಲಿದೆ. ಜನಸಂಖ್ಯೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಪರ್ಯಾಯ ನಗರ ಪ್ರದೇಶಗಳಿಗೆ ವಿಕೇಂದ್ರೀಕರಿಸಲು ಈ ಯೋಜನೆ ನೆರವಾಗುವುದು ಸಂಚಾರ ದಟ್ಟಣೆ, ವಾಯು-ಶಬ್ದ ಮಾಲಿನ್ಯವನ್ನು ಕೂಡ ತಡೆಗಟ್ಟಬಹುದು ಎಂಬುದು ರಾಜ್ಯ ಕಾಂಗ್ರೆಸ್ ಸರ್ಕಾರದ ಸಮರ್ಥನೆ.

ಶೇ.80ರಷ್ಟು ಮಂದಿ ಜಮೀನು ಒಡೆಯರು ಭೂಸ್ವಾಧೀನಕ್ಕೆ ಒಪ್ಪಿದ್ದಾರೆಂಬುದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ. ಆದರೆ ಸರ್ಕಾರ ನೀಡುವ ನಗದು ಪರಿಹಾರವನ್ನು ಒಪ್ಪಿಕೊಂಡು ಮತ್ತೊಂದೆಡೆ ಜಮೀನು ಖರೀದಿ ಸಾಧ್ಯವಿಲ್ಲ ಎಂಬುದು ಸಾಕಷ್ಟು ರೈತರ ದೂರಾಗಿದೆ. ಬಿಡದಿಯ 50 ಕಿಲೋಮೀಟರು ಫಾಸಲೆಯಲ್ಲಿ ಎಕರೆಗೆ ಎರಡೂವರೆ ಕೋಟಿ ರುಪಾಯಿ ದರಕ್ಕೆ ಜಮೀನು ಎಲ್ಲಿಯೂ ಸಿಗುವುದಿಲ್ಲ ಎಂಬುದು ಪರಿಹಾರದಿಂದ ಪುನಃ ಜಮೀನು ಖರೀದಿ ಉದ್ದೇಶವಿರುವ ರೈತರ ಅಳಲು.

ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಬೈರಮಂಗಲ, ಬನ್ನಿಗಿರಿ, ಹೊಸೂರು, ಕೆ.ಜಿ.ಗೊಲ್ಲರ ಪಾಳ್ಯ, ಕಂಚುಗಾರನಹಳ್ಳಿ, ಅರಳಾಳುಸಂದ್ರ, ಕೆಂಪಯ್ಯನ ಪಾಳ್ಯ, ಮಂಡಲಹಳ್ಳಿ, ಹಾರೋಹಳ್ಳಿ ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಭಾಗಶಃ ಈ ಯೋಜನೆಗೆ ಜಮೀನು ಒದಗಿಸಬೇಕಿದೆ.

ಭೂಸ್ವಾಧೀನಕ್ಕೆ ಪರಿಹಾರವಾಗಿ ಪ್ರತಿ ಎಕರೆಗೆ 9,693 ಚದರ ಅಡಿಗಳಷ್ಟು ಅಭಿವೃದ್ಧಿಪಡಿಸಿದ ನಿವೇಶನ ನೀಡಲಾಗುವುದು. ನಗದು ಪರಿಹಾರ ಬಯಸುವವರಿಗೆ ಎಕರೆಗೆ 2.50 ಕೋಟಿ ರುಪಾಯಿ ನಿಗದಿ ಮಾಡಲಾಗಿದೆ.

ಈ ಉದ್ದೇಶಿತ ಟೌನ್ ಶಿಪ್ ಯೋಜನೆಯ ಸುತ್ತಮುತ್ತ ಭೂಸ್ವಾಧೀನಕ್ಕೆ ಒಳಪಡದ ಜಮೀನುಗಳ ಬೆಲೆ ಹಠಾತ್ತನೆ ಎಕರೆಗೆ ಐದು ಕೋಟಿ ರುಪಾಯಿಗೆ ಜಿಗಿದಿದೆ. ಭೂಸ್ವಾಧೀನ ಅಧಿಸೂಚನೆಯ ನಿರೀಕ್ಷೆಯಲ್ಲಿ ಎಕರೆಗೆ ಐದು ಕೋಟಿ ರುಪಾಯಿಯಂತೆ ಸುಮಾರು 586 ಎಕರೆ ಕ್ರಯವಿಕ್ರಯ ವ್ಯವಹಾರ ಜರುಗಿರುವ ಸೂಚನೆಗಳಿವೆ.

ಈ ಐದು ಕೋಟಿ ರುಪಾಯಿಗಳಿಗೆ ಕಾಲಾನುಕ್ರಮದಲ್ಲಿ ನೂರು ಕೋಟಿ ಲಾಭ ಗಳಿಸುವ ವ್ಯವಹಾರವನ್ನು ಬಲ್ಲವರೇ ಈ ಭೂಮಿಯನ್ನು ಖರೀದಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಾರ್ವಜನಿಕರ ನಂಬಿಕೆಗೆ ಪಾತ್ರವಾಗುವ ಕೆಲಸ ಮಾಡಿರುವುದು ವಿರಳಾತಿವಿರಳ. ಬಿಡದಿ ಟೌನ್ ಶಿಪ್ ಯೋಜನೆ ಬಗ್ಗೆ ಕೂಡ ನಿವೇಶನ ಬಯಸುವ ಜನಸಾಮಾನ್ಯರು ಮತ್ತು ಜಮೀನು ಕಳೆದುಕೊಳ್ಳುವ ರೈತರು ಈ ಪ್ರಾಧಿಕಾರವನ್ನು ಯಾತಕ್ಕಾಗಿ ನಂಬಬೇಕು ಎಂಬ ಪ್ರಶ್ನೆ ಇದ್ದೇ ಇದೆ. ಶಿವರಾಮ ಕಾರಂತ ಬಡಾವಣೆ, ಕೆಂಪೇಗೌಡ ಬಡಾವಣೆ ಮುಂತಾದ ಅನೇಕ ಬಡಾವಣೆಗಳಿಗೆ ಮೂಲಸೌಲಭ್ಯಗಳ ನಿರ್ಮಾಣ ಈಗಲೂ ಆಗಿಲ್ಲ.

ಹೀಗೆ ಬಿಡಿಎ ಎಕರೆಗೆ 2.50 ಕೋಟಿ ರುಪಾಯಿಯಂತೆ ತಾನು ಸ್ವಾಧೀನಪಡಿಸಿಕೊಳ್ಳುವ 781 ಎಕರೆ ಜಮೀನನ್ನು ಚದರಡಿಗಳಿಗೆ ವಿಭಾಗಿಸಿ ಲೆಕ್ಕ ಹಾಕಿದರೆ. ಬಿಡಿಎ ಲೆಕ್ಕಕ್ಕೆ ಜಮೆಯಾಗುವ ಚದರಡಿಗಳ ಸಂಖ್ಯೆ ಸುಮಾರು 18 ಕೋಟಿ. ಈ ಪೈಕಿ ಶೇ.45ರಷ್ಟನ್ನು ರಸ್ತೆ ಮತ್ತು ಉದ್ಯಾನವನ ಮತ್ತಿತರೆ ಸಾರ್ವಜನಿಕ ಸೌಲಭ್ಯಗಳಿಗೆ ಮೀಸಲಿಡಬೇಕಾದೀತು. ಅಭಿವೃದ್ಧಿಪಡಿಸಿ ಮಾರಾಟ ಮಾಡಲು ಉಳಿಯಬಹುದಾದ ಪ್ರಮಾಣ ಶೇ.55. ವಾಣಿಜ್ಯ ಮತ್ತು ವಸತಿ ನಿವೇಶನಗಳನ್ನು ಮಾಡಿ ಚದರಡಿಗೆ ನಾಲ್ಕು ಸಾವಿರ ರುಪಾಯಿ ದರಕ್ಕೆ ಮಾರಿದರೂ ಹತ್ತಾರು ಸಾವಿರ ಕೋಟಿ ರುಪಾಯಿಗಳ ಲಾಭ ಗಳಿಸಬೇಕು. ಯೋಜನೆ ಮುಗಿಯುವ ಹೊತ್ತಿಗೆ ಸಾಲ ಇಲ್ಲವೇ ಬರಿಗೈ ತೋರಿಸುತ್ತೆ. ಬಿಡಿಎ ನಿರಂತರ ನಷ್ಟ. ಕುಖ್ಯಾತಿ ಹತ್ತಾರು ವರ್ಷಗಳು ಕಳೆದರೂ ನೀರು, ವಿದ್ಯುಚ್ಛಕ್ತಿ, ಪಾರ್ಕ್ ಪೂರ್ಣವಾಗಿರುವುದಿಲ್ಲ. ಸಾರ್ವಜನಿಕ ಸೌಲಭ್ಯಗಳ ಜಾಗವನ್ನೂ ಕಾಲಕ್ರಮೇಣ ನುಂಗಲಾಗುತ್ತದೆ.

ಭೂಸ್ವಾಧೀನ ಯೋಜನೆಗಳಲ್ಲಿ ಸರ್ಕಾರಕ್ಕೆ ಜಮೀನು ಒಪ್ಪಿಸಿ ರೈತರು ಪಡೆಯುವ ಪರಿಹಾರ ಜಮೀನಿನಂತೆ ಅವರ ಕೈಯಲ್ಲಿ ಬಹುಕಾಲ ನಿಲ್ಲುವುದಿಲ್ಲ. ನಗದು ಪರಿಹಾರ ಮತ್ತು ಅಭಿವೃದ್ಧಿಪಡಿಸಿದ ನಿವೇಶನಗಳು ಎರಡನ್ನೂ ನೀಡಬೇಕೆಂಬ ಬೇಡಿಕೆಯನ್ನು ಬಿಡದಿಯ ರೈತರು ಸರ್ಕಾರದ ಮುಂದಿಟ್ಟಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಬೇಡಿಕೆಯನ್ನು ತಕ್ಷಣವೇ ಒಪ್ಪಿಕೊಂಡಿಲ್ಲ. ಯೋಚನೆ ಮಾಡುವುದಾಗಿ ಹೇಳಿದ್ದಾರೆ.

ಭೂಸ್ವಾಧೀನ ಮಾಡಿಕೊಳ್ಳುವಾಗ ಉಳುಮೆಗೆ ಯೋಗ್ಯವಲ್ಲದ ಖರಾಬು ಜಾಗವೂ ಬಿಡಿಎ ಗೆ ಪುಕ್ಕಟೆ ಸಿಗುತ್ತದೆ. ಅದಕ್ಕೆ ಪರಿಹಾರ ಕೊಡಬೇಕಿಲ್ಲ. ಸರ್ಕಾರಿ ಜಾಗಗಳಾದ ಗೋಮಾಳ, ಗುಂಡುತೋಪುಗಳಲ್ಲಿ ಉಳುಮೆ ಮಾಡಿದವರನ್ನು ಒಕ್ಕಲೆಬ್ಬಿಸಿ ವಶಪಡಿಸಿಕೊಳ್ಳಲಾಗುತ್ತದೆ. ಹೀಗೆ ಅನಾಯಾಸವಾಗಿ ಸಿಗುವ ನೂರಾರು ಎಕರೆ ಭೂಮಿ ಅಧಿಕಾರಿಗಳು ಮತ್ತು ರಾಜಕಾರಣಿಗಳಲ್ಲಿ ಹಂಚಿಕೆಯಾಗುತ್ತದೆಯೇ? ಈ ಟೌನ್ ಶಿಪ್ ನಿರ್ಮಾಣದ ಹತ್ತಾರು ಬಗೆಯ ಗುತ್ತಿಗೆಗಳು ಉಪಗುತ್ತಿಗೆಗಳು ತುಂಡು ಗುತ್ತಿಗೆಗಳು ಯಾರಿಗೆ ಸಿಗುತ್ತವೆ, ಯಾರಿಗೆ ಸಿಗಬೇಕೆಂದು ತೀರ್ಮಾನಿಸುವ ಅಧಿಕಾರ ಯಾರದು, ಈ ಅಧಿಕಾರದಿಂದ ಅವರು ಲಾಭ ಗಳಿಸುವುದಿಲ್ಲವೇ? ರಿಯಲ್ ಎಸ್ಟೇಟ್ ಲೇವಾದೇವಿಯನ್ನು ಹೊಂದಿರುವ ಯೋಜನೆಗಳಿಗೆ ರಾಜಕಾರಣಿಗಳು ಮುಗಿ ಬೀಳುವ ರಹಸ್ಯವೇನು?

ಭೂಸ್ವಾಧೀನಕ್ಕೆ ಮತ್ತೊಂದು ಅಮಾನುಷ ಆಯಾಮವೂ ಇದೆ. ಆಯಾ ಗ್ರಾಮಗಳಲ್ಲಿ ಅಪ್ರತ್ಯಕ್ಷವಾಗಿ ಜಮೀನನ್ನು ನೆಚ್ಚಿ ಬದುಕು ಸಾಗಿಸುವ ಇತರೆ ಉಪವೃತ್ತಿಗಳವರು, ಕೃಷಿ ಕಾರ್ಮಿಕರು ನಿರಾಶ್ರಿತರಾಗುತ್ತಾರೆ. ಅವರಿಗೆ ಯಾವುದೇ ಪರಿಹಾರದ ಅವಕಾಶವಿಲ್ಲ ಕಾನೂನಿನಲ್ಲಿ. ಭೂಸ್ವಾಧೀನದ ಈ ಪರೋಕ್ಷ ಸಾಮಾಜಿಕ ಆರ್ಥಿಕ ಹಾನಿಯನ್ನು ಭರಿಸುವ ಬಗೆಯಿಲ್ಲ.

ಎಕರೆಗೆ ಮೂವತ್ತು ನಲವತ್ತು ವಿಸ್ತೀರ್ಣದ 20 ನಿವೇಶನಗಳನ್ನು ಮಾಡುವ ಸರ್ಕಾರ ರೈತರಿಗೆ ಎಂಟನ್ನು ಪರಿಹಾರವಾಗಿ ನೀಡುವ ಅಂದಾಜು ಕಾಣಬರುತ್ತದೆ. ಉಳಿದ ಹನ್ನೆರಡನ್ನು ತಾನು ಇಟ್ಟುಕೊಳ್ಳುತ್ತದೆ. ಅಭಿವೃದ್ಧಿಪಡಿಸಿದ ಒಂದು ನಿವೇಶನಕ್ಕೆ 50 ಲಕ್ಷ ರುಪಾಯಿ ಬೆಲೆ ನಿಗದಿ ಮಾಡಿದರೂ ಸಂಗ್ರಹವಾಗುವ ಮೊತ್ತ ಭಾರೀ ಎನಿಸಬಹುದಾದದ್ದೇ.

ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದೇ ಅಲ್ಲದೆ ಅವರು ಕೇಳುವ ಪರಿಹಾರವನ್ನು ಸರ್ಕಾರ ನೀಡಬೇಕು ಇಲ್ಲವೇ ಭಾರೀ ರಿಯಲ್ ಎಸ್ಟೇಟ್ ಧಂಧೆಯ ಎಲ್ಲ ಸೂಚನೆಗಳನ್ನು ಹೊಂದಿರುವ ಈ ಭೂಸ್ವಾಧೀನವನ್ನು ಕೈಬಿಡಬೇಕು.

ರೋಚಕ ಘಟ್ಟ: 3 ತಂಡಗಳ ಪ್ಲೇ-ಆಫ್ ಪ್ರವೇಶ,1 ಸ್ಥಾನಕ್ಕಾಗಿ 5 ತಂಡಗಳ ಹಣಾಹಣಿ

ಐಪಿಎಲ್‌ನ ಮುಂಬರುವ ಅಂತಿಮ ಲೀಗ್ ಪಂದ್ಯಗಳು ಅತ್ಯಂತ ಮಾಡು ಇಲ್ಲವೆ ಮಡಿ ಪಂದ್ಯಗಳಾಗಿ ಮಾರ್ಪಟ್ಟಿವೆ.ಅಂತಿಮವಾಗಿ ಈ ಐದು ತಂಡಗಳ ಹಗ್ಗಜಗ್ಗಾಟದಲ್ಲಿ ಯಾವ ತಂಡವು ಆ ಅದೃಷ್ಟದ 4ನೇ ಸ್ಥಾನವನ್ನು ಒಲಿಸಿಕೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ



ಪ್ರಸ್ತುತ ನಡೆಯುತ್ತಿರುವ ಬಹುನಿರೀಕ್ಷಿತ ಕ್ರಿಕೆಟ್ ಟೂರ್ನಿಯು ಅತ್ಯಂತ ರೋಚಕ ಹಾಗೂ ನಿರ್ಣಾಯಕ ಘಟ್ಟವನ್ನು ತಲುಪಿದೆ. ಲೀಗ್ ಹಂತದ ಬಹುಪಾಲು ಪಂದ್ಯಗಳು ಈಗಾಗಲೇ ಮುಕ್ತಾಯಗೊಂಡಿದ್ದು, ಪ್ಲೇ-ಆಫ್‌ಗೆ ಯಾವ ತಂಡಗಳು ಪ್ರವೇಶಿಸಲಿವೆ ಎಂಬ ಕುತೂಹಲ ಕ್ರಿಕೆಟ್ ಅಭಿಮಾನಿಗಳಲ್ಲಿ ತೀವ್ರವಾಗಿ ಮನೆಮಾಡಿದೆ.

ಬಹುತೇಕ ತಂಡಗಳು ತಮ್ಮ ಲೀಗ್ ಹಂತದ ಪಂದ್ಯಗಳಲ್ಲಿ ತಲಾ ಹನ್ನೆರಡು ಅಥವಾ ಹದಿಮೂರು ಪಂದ್ಯಗಳನ್ನು ಆಡಿ ಮುಗಿಸಿವೆ. ಈ ಹಂತದಲ್ಲಿ ಅಂಕಪಟ್ಟಿಯಲ್ಲಿನ ಅಂಕಿ-ಅಂಶಗಳು ಕ್ಷಣಕ್ಷಣಕ್ಕೂ ಬದಲಾಗುತ್ತಿದ್ದು, ಟೂರ್ನಿಯು ಅಂತಿಮ ಘಟ್ಟದ ರೋಮಾಂಚನವನ್ನು ಸೃಷ್ಟಿಸಿದೆ. ಲಭ್ಯವಿರುವ ತಾಜಾ ಅಂಕಪಟ್ಟಿಯ ಪ್ರಕಾರ, ಪ್ಲೇ-ಆಫ್ ಚಿತ್ರಣವು ಸ್ಪಷ್ಟವಾಗತೊಡಗಿದೆ.

ಐಪಿಎಲ್ ನಿಯಮಗಳ ಪ್ರಕಾರ, ಪ್ಲೇ-ಆಫ್‌ಗೆ ಪ್ರವೇಶಿಸಲು ಒಟ್ಟು ನಾಲ್ಕು ಸ್ಥಾನಗಳಿರುತ್ತವೆ. ಲಭ್ಯವಿರುವ ಮಾಹಿತಿಯಂತೆ, ಈ ನಾಲ್ಕು ಸ್ಥಾನಗಳಲ್ಲಿ ಈಗಾಗಲೇ ಮೂರು ಸ್ಥಾನಗಳು ಅಧಿಕೃತವಾಗಿ ಭರ್ತಿಯಾಗಿವೆ. ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಟಾಪ್ ಮೂರು ತಂಡಗಳು ತಮ್ಮ ಅತ್ಯುನ್ನತ ಹಾಗೂ ಸ್ಥಿರ ಪ್ರದರ್ಶನದ ಮೂಲಕ ಮುಂದಿನ ಹಂತಕ್ಕೆ ಅರ್ಹತೆ (ಕ್ವಾಲಿಫೈ) ಪಡೆದುಕೊಂಡಿವೆ. ಈ ಮೂಲಕ ಈ ಮೂರು ಬಲಿಷ್ಠ ತಂಡಗಳ ಅಭಿಮಾನಿಗಳು ತಮ್ಮ ತಂಡಗಳ ಮುಂದಿನ ಪಯಣದ ಬಗ್ಗೆ ಸಂಪೂರ್ಣ ನಿರಾಳರಾಗಿದ್ದಾರೆ. ಆದರೆ, ಬಾಕಿ ಉಳಿದಿರುವ ಕೇವಲ ಒಂದೇ ಒಂದು ಸ್ಥಾನಕ್ಕಾಗಿ ಅಂಕಪಟ್ಟಿಯ ಮಧ್ಯಭಾಗದಲ್ಲಿರುವ ಐದು ತಂಡಗಳ ನಡುವೆ ಭಾರೀ ಪೈಪೋಟಿ ಏರ್ಪಟ್ಟಿದೆ.

ಈ ಬಾರಿಯ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ()ತಂಡವು ಅದ್ಭುತ ಫಾರ್ಮ್‌ನಲ್ಲಿದ್ದು, ಅಂಕಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಕಾಯ್ದುಕೊಳ್ಳುವ ಮೂಲಕ ದರ್ಪದೊಂದಿಗೆ ಪ್ಲೇ-ಆಫ್‌ಗೆ ಲಗ್ಗೆ ಇಟ್ಟಿದೆ. ಆರ್‌ಸಿಬಿ ತಂಡವು ತಾನು ಆಡಿರುವ 13 ಪಂದ್ಯಗಳಲ್ಲಿ ಭರ್ಜರಿ 9 ಗೆಲುವು ಹಾಗೂ ಕೇವಲ 4 ಸೋಲುಗಳೊಂದಿಗೆ ಒಟ್ಟು 18 ಅಂಕಗಳನ್ನು ಕಲೆಹಾಕಿದೆ. ಇದರ ಜೊತೆಗೆ +1.065 ರಷ್ಟು ಅತ್ಯುತ್ತಮ ನೆಟ್ ರನ್ ರೇಟ್ () ಹೊಂದುವ ಮೂಲಕ ಅಂಕಪಟ್ಟಿಯಲ್ಲಿ ಅಗ್ರಗಣ್ಯವಾಗಿ ಹೊರಹೊಮ್ಮಿದೆ. ಈ ಪ್ರಬಲ ಅಂಕಿ-ಅಂಶಗಳು ಆರ್‌ಸಿಬಿ ತಂಡದ ಪಾರುಪತ್ಯವನ್ನು ಸಾಬೀತುಪಡಿಸಿವೆ.

ಇನ್ನುಳಿದಂತೆ, ಗುಜರಾತ್ ಟೈಟಾನ್ಸ್ () ಮತ್ತು ಸನ್‌ರೈಸರ್ಸ್ ಹೈದರಾಬಾದ್ ()ತಂಡಗಳು ಕೂಡ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳನ್ನು ಭದ್ರಪಡಿಸಿಕೊಂಡು ಪ್ಲೇ-ಆಫ್‌ಗೆ ಅಧಿಕೃತವಾಗಿ ಕ್ವಾಲಿಫೈ ಆಗಿವೆ. ಜಿಟಿ ತಂಡವು 13 ಪಂದ್ಯಗಳಲ್ಲಿ 8 ಗೆಲುವು ಹಾಗೂ 5 ಸೋಲು ಕಂಡು 16 ಅಂಕಗಳೊಂದಿಗೆ (+0.400) ಎರಡನೇ ಸ್ಥಾನದಲ್ಲಿದೆ. ಹಾಗೆಯೇ, ಎಸ್‌ಆರ್‌ಹೆಚ್ ತಂಡವು ಕೂಡ 13 ಪಂದ್ಯಗಳಲ್ಲಿ 8 ಗೆಲುವು ಮತ್ತು5 ಸೋಲಿನೊಂದಿಗೆ 16 ಅಂಕಗಳನ್ನು ಪಡೆದಿದ್ದರೂ, ನೆಟ್ ರನ್ ರೇಟ್ (+0350) ಕೊಂಚ ಕಡಿಮೆಯಿರುವ ಆಧಾರದ ಮೇಲೆ ಮೂರನೇ ಸ್ಥಾನವನ್ನು ತೃಪ್ತಿಪಟ್ಟುಕೊಂಡಿದೆ.

ಟೂರ್ನಿಯ ಅಗ್ರ 3 ತಂಡಗಳು ಸುಲಭವಾಗಿ ಕ್ವಾಲಿಫೈ ಆಗಿದ್ದರೆ, ಅಂಕಪಟ್ಟಿಯ ತಳಭಾಗದಲ್ಲಿರುವ ಮುಂಬೈ ಇಂಡಿಯನ್ಸ್ () ಮತ್ತು ಲಕ್ನೋ ಸೂಪರ್ ಜೈಂಟ್ಸ್ () ತಂಡಗಳಿಗೆ ತೀವ್ರ ನಿರಾಸೆಯಾಗಿದೆ. 13 ಪಂದ್ಯಗಳನ್ನಾಡಿರುವ ಎಲ್‌ಎಸ್‌ಜಿ ಹಾಗೂ 12 ಪಂದ್ಯಗಳನ್ನಾಡಿರುವ ಎಂಐ ತಂಡಗಳು ತಲಾ ಕೇವಲ 8 ಅಂಕಗಳನ್ನು ಹೊಂದುವ ಮೂಲಕ (ಕ್ರಮವಾಗಿ -0.702 ಮತ್ತು -0.504) ಟೂರ್ನಿಯಿಂದ ಅಧಿಕೃತವಾಗಿ ಎಲಿಮಿನೇಟ್ (ಹೊರಬಿದ್ದಿವೆ) ಆಗಿವೆ. ಹೀಗಾಗಿ, ಈಗ ಉಳಿದಿರುವ ಪ್ಲೇ-ಆಫ್‌ನ ಅಂತಿಮ 4ನೇ ಸ್ಥಾನಕ್ಕಾಗಿ ಐದು ತಂಡಗಳಾದ ರಾಜಸ್ಥಾನ್ ರಾಯಲ್ಸ್, ಪಂಜಾಬ್ ಕಿಂಗ್ಸ್, ಚೆನ್ನೈ, ಡೆಲ್ಲಿ ಮತ್ತು ಕೋಲ್ಕತ್ತಾ ನಡುವೆ ತೀವ್ರ ಸೆಣಸಾಟ ಏರ್ಪಟ್ಟಿದೆ.

ಪ್ರಸ್ತುತ ಅಂಕಪಟ್ಟಿಯಲ್ಲಿ ರಾಜಸ್ಥಾನ್ ರಾಯಲ್ಸ್ () ತಂಡವು 13 ಪಂದ್ಯಗಳಲ್ಲಿ 7 ಗೆಲುವು ಮತ್ತು 6 ಸೋಲುಗಳೊಂದಿಗೆ 14 ಅಂಕಗಳನ್ನು (+0.083) ಪಡೆದು ನಾಲ್ಕನೇ ಸ್ಥಾನದಲ್ಲಿದೆ.

ಇನ್ನು ಐದನೇ ಸ್ಥಾನದಲ್ಲಿರುವ ಪಂಜಾಬ್ ಕಿಂಗ್ಸ್ () 13 ಪಂದ್ಯಗಳಿಂದ 6 ಗೆಲುವು, 6 ಸೋಲು ಹಾಗೂ ಒಂದು ಪಂದ್ಯ ರದ್ದಾದ ಕಾರಣ 13 ಅಂಕಗಳನ್ನು (+0.227) ಹೊಂದಿದೆ. ಈ ಎರಡೂ ತಂಡಗಳು ತಮ್ಮ ಕೊನೆಯ ಲೀಗ್ ಪಂದ್ಯಗಳಲ್ಲಿ ಕಡ್ಡಾಯವಾಗಿ ಗೆಲ್ಲಲೇಬೇಕಾದ ತೀವ್ರ ಒತ್ತಡದಲ್ಲಿವೆ. ರಾಜಸ್ಥಾನ್ ಮುಂದಿನ ಪಂದ್ಯ ಗೆದ್ದರೆ ಸುಲಭವಾಗಿ 16 ಅಂಕಗಳೊಂದಿಗೆ 4ನೇ ಸ್ಥಾನ ಭದ್ರಪಡಿಸಿಕೊಳ್ಳಬಹುದು.

ಮತ್ತೊಂದೆಡೆ, ಚೆನ್ನೈ ಸೂಪರ್ ಕಿಂಗ್ಸ್ ()ಮತ್ತು ಡೆಲ್ಲಿ ಕ್ಯಾಪಿಟಲ್ಸ್ () ತಂಡಗಳು ತಲಾ 13 ಪಂದ್ಯಗಳನ್ನು ಆಡಿ ತಲಾ ಕೇವಲ 12 ಅಂಕಗಳನ್ನು ಪಡೆದುಕೊಂಡಿವೆ. ಇವುಗಳು ನೆಟ್ ರನ್ ರೇಟ್ ಆಧಾರದ ಮೇಲೆ (-0.016, -0.871) ಆರನೇ ಮತ್ತು ಏಳನೇ ಸ್ಥಾನದಲ್ಲಿವೆ. ಇನ್ನು ಎಂಟನೇ ಸ್ಥಾನದಲ್ಲಿರುವ ಕೋಲ್ಕತ್ತಾ ನೈಟ್ ರೈಡರ್ಸ್ ()12 ಪಂದ್ಯಗಳಿಂದ 5 ಗೆಲುವು, 1 ಪಂದ್ಯ ರದ್ದಾದ ಕಾರಣ 11 ಅಂಕ ಹೊಂದಿದೆ. ಆದರೆ, ಕೆಕೆಆರ್ ತಂಡಕ್ಕೆ ಇನ್ನು ಎರಡು ಪಂದ್ಯಗಳು ಬಾಕಿ ಇರುವುದರಿಂದ, ಎರಡನ್ನೂ ಗೆದ್ದರೆ ಗರಿಷ್ಠ 15 ಅಂಕಗಳನ್ನು ತಲುಪುವ ಸುವರ್ಣ ಅವಕಾಶ ಆ ತಂಡಕ್ಕಿದ್ದು, ಇದು ನಾಲ್ಕನೇ ಸ್ಥಾನದ ಮೇಲಿರುವ ಉಳಿದ ತಂಡಗಳಿಗೆ ದೊಡ್ಡ ಆತಂಕ ತಂದೊಡ್ಡಿದೆ.

ಐಪಿಎಲ್‌ನ ಮುಂಬರುವ ಅಂತಿಮ ಲೀಗ್ ಪಂದ್ಯಗಳು ಅತ್ಯಂತ ಮಾಡು ಇಲ್ಲವೆ ಮಡಿ ಪಂದ್ಯಗಳಾಗಿ ಮಾರ್ಪಟ್ಟಿವೆ. ಸದ್ಯ 14 ಅಂಕ ಹೊಂದಿರುವ ರಾಜಸ್ಥಾನ್ ತಂಡವು ಪ್ಲೇ-ಆಫ್ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದರೂ, 15 ಅಂಕ ತಲುಪಬಲ್ಲ ಸಾಮರ್ಥ್ಯವಿರುವ ಕೆಕೆಆರ್ ಹಾಗೂ ತಮ್ಮ ಕೊನೆಯ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿ ಇತರ ತಂಡಗಳ ಸೋಲಿಗೆ ಕಾಯುವ ಚೆನ್ನೈ, ಡೆಲ್ಲಿ ಮತ್ತು ಪಂಜಾಬ್ ತಂಡಗಳ ಲೆಕ್ಕಾಚಾರಗಳು ಬಹು ಸಂಕೀರ್ಣವಾಗಿವೆ. ಅಂತಿಮವಾಗಿ ಈ ಐದು ತಂಡಗಳ ಹಗ್ಗಜಗ್ಗಾಟದಲ್ಲಿ ಯಾವ ತಂಡವು ಆ ಅದೃಷ್ಟದ 4ನೇ ಸ್ಥಾನವನ್ನು ಒಲಿಸಿಕೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮಾನವ ಹಕ್ಕುಗಳ ದನಿ, ಹಿರಿಯ ಹೋರಾಟಗಾರ ಜಿ. ಅನಂತ್ ಪದ್ಮನಾಭನ್

ತೀವ್ರ ಕಾಯಿಲೆ ಬಾಧಿಸುತ್ತಿದ್ದರೂ ಅನಂತ್ ಪದ್ಮನಾಭನ್ ಅವರು 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರೋಧಿ ಅಭಿಯಾನಕ್ಕೆ ವಿವಿಧ ರೀತಿಯಲ್ಲಿ ಕೊಡುಗೆ ನೀಡಿದ್ದರು. 2024ರ ಲೋಕಸಭಾ ಚುನಾವಣೆಯಲ್ಲೂ ಸಂವಿಧಾನ ವಿರೋಧಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಪತ್ನಿ ಕವಿತಾ ಕುರುಗಂಟಿ ಅವರೊಂದಿಗೆ ದೇಶಾದ್ಯಂತ ಪ್ರವಾಸ ಕೈಗೊಂಡು, ಸಾಮಾಜಿಕ ಕಾರ್ಯಕರ್ತರನ್ನು ಹುರಿದುಂಬಿಸಿದ್ದರು

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಸರ ಮತ್ತು ಮಾನವ ಹಕ್ಕುಗಳ ರಕ್ಷಣೆಗಾಗಿ ಮುಂಚೂಣಿಯಲ್ಲಿ ನಿಂತು ಹೋರಾಡಿದ ಹಿರಿಯ ಚಿಂತಕ, ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಹಾಗೂ ಗ್ರೀನ್‌ಪೀಸ್ ಸಂಸ್ಥೆಗಳ ಮಾಜಿ ಮುಖ್ಯಸ್ಥ ಜಿ. ಅನಂತ್ ಪದ್ಮನಾಭನ್ (65) ಅವರು ಶನಿವಾರ (ಏಪ್ರಿಲ್ 18) ಮುಂಜಾನೆ 3 ಗಂಟೆಗೆ ಮೈಸೂರಿನಲ್ಲಿ ನಿಧನರಾಗಿದ್ದಾರೆ. ಕ್ಯಾನ್ಸರ್ ಮಹಾಮಾರಿಯನ್ನು ನೈಸರ್ಗಿಕ ಚಿಕಿತ್ಸೆ ಹಾಗೂ ದೃಢ ಇಚ್ಛಾಶಕ್ತಿಯಿಂದ ಎದುರಿಸಿದ ಅವರು, ತಮ್ಮ ಹೋರಾಟದ ಬದುಕನ್ನು ಪ್ರಕೃತಿಯ ಮಡಿಲಿಗೆ ಅರ್ಪಿಸಿದ್ದಾರೆ. ದೆಹಲಿ ರೈತ ಹೋರಾಟದ ಸಂಯುಕ್ತ ಕಿಸಾನ್ ಮೋರ್ಚಾದ ಪ್ರಮುಖ ನಾಯಕಿ ಕವಿತಾ ಕುರುಗಂಟಿ ಅವರ ಬಾಳಸಂಗಾತಿಯಾಗಿದ್ದ ಅನಂತ್, ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

ಸುದೀರ್ಘ ಹೋರಾಟದ ಬದುಕು, ಬಹುಮುಖಿ ಸಾಧನೆ

ಐಐಟಿ ಮದ್ರಾಸ್‌ನ ಹಳೆಯ ವಿದ್ಯಾರ್ಥಿಯಾಗಿದ್ದ ಅನಂತ್, ಅತ್ಯಂತ ಪ್ರತಿಭಾವಂತ ಹಾಗೂ ವಿಶಿಷ್ಟವಾಗಿ ಆಲೋಚಿಸುವ ವ್ಯಕ್ತಿತ್ವ ಹೊಂದಿದ್ದರು. ಶಿಕ್ಷಣ ಕ್ಷೇತ್ರದತ್ತ ಅಪಾರ ಒಲವು ಹೊಂದಿದ್ದ ಅವರು ದ ಸ್ಕೂಲ್ ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾದಲ್ಲಿ ಶಿಕ್ಷಕರಾಗಿ ವೃತ್ತಿ ಬದುಕು ಆರಂಭಿಸಿದರು. ಆನಂತರ ಸಾಕ್ರಟೀಸ್ () ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಗ್ರೀನ್‌ಪೀಸ್ ಇಂಡಿಯಾದ ಸಿಇಒ ಹಾಗೂ ಗ್ರೀನ್‌ಪೀಸ್ ಇಂಟರ್‌ನ್ಯಾಷನಲ್‌ನ ಕಾರ್ಯಕ್ರಮ ನಿರ್ದೇಶಕರಾಗಿ ಪರಿಸರ ಸಂರಕ್ಷಣೆಗೆ ಅವರು ಜಾಗತಿಕ ಮಟ್ಟದಲ್ಲಿ ಶ್ರಮಿಸಿದ್ದರು. ಭಾರತದಲ್ಲಿ ಗ್ರೀನ್‌ಪೀಸ್ ಸಂಸ್ಥೆಯನ್ನು ಮರುಸ್ಥಾಪಿಸುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು.

ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಮುಖ್ಯಸ್ಥರಾಗಿದ್ದಾಗ, ವಿದೇಶಿ ಅನುದಾನದ ಮೇಲಿನ ಅವಲಂಬನೆಯನ್ನು ತಪ್ಪಿಸಲು ಭಾರತೀಯರಿಗಾಗಿ ಭಾರತೀಯರಿಂದಲೇ ನಿಧಿ ( ) ಎಂಬ ನವೀನ ಹಾಗೂ ಸುಸ್ಥಿರ ಸದಸ್ಯತ್ವ ಆಧಾರಿತ ಮಾದರಿಯನ್ನು ಯಶಸ್ವಿಯಾಗಿ ಜಾರಿಗೆ ತಂದರು. ಅಜೀಂ ಪ್ರೇಮ್‌ಜಿ ಫಿಲಾಂತ್ರಪಿಕ್ ಇನಿಶಿಯೇಟಿವ್ಸ್ () ಸಿಇಒ ಆಗಿ, ಸುಸ್ಥಿರ ಹಾಗೂ ನೈಸರ್ಗಿಕ ಕೃಷಿ ಯೋಜನೆಗಳ ಹಿಂದೆ ಎಲೆಮರೆಕಾಯಿಯಂತೆ ಮೆದುಳಾಗಿ ಕೆಲಸ ಮಾಡಿದರು. ಎಂತಹ ಸವಾಲಿನ ಪರಿಸ್ಥಿತಿಯಲ್ಲೂ ಅತ್ಯಂತ ಪಾರದರ್ಶಕವಾಗಿ ಸಂಸ್ಥೆಯನ್ನು ಮುನ್ನಡೆಸುವ ಕೌಶಲ ಅವರಲ್ಲಿತ್ತು.

ಕ್ಯಾನ್ಸರ್ ವಿರುದ್ಧದ ಸಮರ, ರಾಜಕೀಯ ಜಾಗೃತಿ

ಸುಮಾರು ಎರಡೂವರೆ ವರ್ಷಗಳ ಹಿಂದೆ ಕ್ಯಾನ್ಸರ್ ಪತ್ತೆಯಾದಾಗ, ಅವರು ಸಾವಿಗೆ ಅಂಜಲಿಲ್ಲ. ಅಲೋಪತಿ ಚಿಕಿತ್ಸೆಗಳನ್ನು ಬದಿಗಿಟ್ಟು ಉಪವಾಸ, ಯೋಗ ಹಾಗೂ ಪ್ರತಿನಿತ್ಯ ಸೈಕಲ್ ಸವಾರಿ ಮಾಡುವ ಮೂಲಕ ಸಂಪೂರ್ಣ ನೈಸರ್ಗಿಕ ಜೀವನಶೈಲಿಯ ಮೊರೆಹೋದರು. ದೇಶದಲ್ಲಿ ಕೋಮುವಾದ, ಅಲ್ಪಸಂಖ್ಯಾತರ ಮೇಲಿನ ಹಲ್ಲೆಗಳು ಸೇರಿದಂತೆ



ಅನ್ಯಾಯದ ವಿರುದ್ಧ ನಿರ್ಭೀತವಾಗಿ ಹೋರಾಡಿದರು. ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ದನಿ ಎತ್ತಿದ ಪರಿಣಾಮ, ಕೇಂದ್ರ ಸರ್ಕಾರವು ಆಮ್ನೆಸ್ಟಿ ಸಂಸ್ಥೆ ಹಾಗೂ ಅವರ ಮೇಲೆ ಇಡಿ () ಹಾಗೂ ಪಿಎಂಎಲ್‌ಎ () ಅಡಿಯಲ್ಲಿ ಗಂಭೀರ ಪ್ರಕರಣಗಳನ್ನು ದಾಖಲಿಸಿತ್ತು. ಎಷ್ಟೇ ಸವಾಲುಗಳು ಎದುರಾದರೂ ಅವರು ತಮ್ಮ ಆದರ್ಶಗಳಿಂದ ಹಾಗೂ ಪಾರದರ್ಶಕತೆಯಿಂದ ಹಿಂದೆ ಸರಿಯಲಿಲ್ಲ. ತೀವ್ರ ಕಾಯಿಲೆ ಬಾಧಿಸುತ್ತಿದ್ದರೂ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರೋಧಿ ಅಭಿಯಾನಕ್ಕೆ ವಿವಿಧ ರೀತಿಯಲ್ಲಿ ಕೊಡುಗೆ ನೀಡಿದ್ದರು. 2024ರ ಲೋಕಸಭಾ ಚುನಾವಣೆಯಲ್ಲೂ ಸಂವಿಧಾನ ವಿರೋಧಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಪತ್ನಿ ಕವಿತಾ ಅವರೊಂದಿಗೆ ದೇಶಾದ್ಯಂತ ಪ್ರವಾಸ ಕೈಗೊಂಡು, ಸಾಮಾಜಿಕ ಕಾರ್ಯಕರ್ತರನ್ನು ಹುರಿದುಂಬಿಸಿದ್ದರು.

ಸಾವಿಗೆ ಅವರು ತಮ್ಮನ್ನು ತಾವು ಸಿದ್ದಪಡಿಸಿಕೊಂಡಿದ್ದರಲ್ಲದೆ, ನಮ್ಮೆಲ್ಲರನ್ನೂ ಅದಕ್ಕಾಗಿ ಸಿದ್ದಪಡಿಸಿದ್ದರು. ಅವರು ಬದುಕಿದ ರೀತಿ ಮತ್ತು ಸಾವನ್ನು ಎದುರಿಸಿದ ಬಗೆ ನಮ್ಮೆಲ್ಲರಿಗೂ ಜೀವನದ ಬಹುದೊಡ್ಡ ಆಶಯ ಹಾಗೂ ಸ್ಫೂರ್ತಿಯಾಗಬೇಕು. ಯಾವುದೇ ಕ್ಷೇತ್ರದಲ್ಲಾದರೂ ವಿಭಿನ್ನವಾಗಿ ಆಲೋಚಿಸಿ ಅದ್ಭುತ ಪರಿಹಾರಗಳನ್ನು ಕಂಡುಕೊಳ್ಳಬಲ್ಲ ಅತ್ಯುತ್ತಮ ಮಿದುಳು ಅವರದ್ದಾಗಿತ್ತು. ಭಾರತ್ ಜೋಡೋ ಅಭಿಯಾನದಲ್ಲಿ ನಮ್ಮ ಜೊತೆ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬರಿಗೂ ಅವರು ಹೊಸ ಹೊಸ ಐಡಿಯಾಗಳನ್ನು ಹೇಳುತ್ತಾ, ಸದಾ ಉತ್ಸಾಹ ತುಂಬುತ್ತಿದ್ದರು. ಅವರ ಸಂಗಾತಿ ಕವಿತಾ ಕುರುಗಂಟಿ ಅವರ ಮೂಲಕ ಪರಿಚಯವಾದ ಅನಂತ್ ಅವರನ್ನು, ಕಳೆದ ಐದು ವರ್ಷಗಳಿಂದ ನನ್ನ ಸ್ನೇಹಿತ, ಮಾರ್ಗದರ್ಶಕ ಮತ್ತು ಲೈಫ್ ಕೋಚ್ ಎಂದು ಕರೆಯುವ ಭಾಗ್ಯ ನನ್ನದಾಗಿತ್ತು. ಅವರು ಕ್ಯಾನ್ಸರ್ ಅನ್ನು ಅಪ್ಪಿಕೊಂಡ ಮತ್ತು ಸಾವಿಗೆ ಸಿದ್ಧರಾದ ಸುಂದರವಾದ ರೀತಿ ನನಗೆ ಜೀವನದ ಬಹುದೊಡ್ಡ ಪಾಠವಾಗಿದೆ. ನಿಮ್ಮ ಅನಂತ ಪ್ರಯಾಣಕ್ಕೆ ಅಲ್ವಿದಾ ಅನಂತ್ ಮುಂದೊಂದು ದಿನ ನಾವೂ ಬಂದು ನಿಮ್ಮನ್ನು ಸೇರುತ್ತೇವೆ''

''ನಾನು ಅವರೊಂದಿಗೆ 2000ನೇ ಇಸವಿಯ ಆರಂಭದಲ್ಲಿ ಗ್ರೀನ್‌ಪೀಸ್‌ನಲ್ಲಿ ಕೆಲಸ ಮಾಡಿದ್ದೆ ಮತ್ತು ಆನಂತರ ಆಮ್ನೆಸ್ಟಿಯಲ್ಲಿ ಜೊತೆಯಾಗಿ ಕಾರ್ಯನಿರ್ವಹಿಸಿದೆವು. ಭಾರತದಲ್ಲಿ ಗ್ರೀನ್‌ಪೀಸ್ ಸಂಸ್ಥೆಯನ್ನು ಮರುಸ್ಥಾಪಿಸುವ ಜವಾಬ್ದಾರಿಯನ್ನು ಅವರು ಯಶಸ್ವಿಯಾಗಿ ನಿಭಾಯಿಸಿದ್ದರು. ಆಮ್ನೆಸ್ಟಿಯಲ್ಲಿದ್ದಾಗ, ಮಾನವ ಹಕ್ಕುಗಳ ಹೋರಾಟವನ್ನು ಬೆಂಬಲಿಸಲು ಭಾರತೀಯರಿಗಾಗಿ ಭಾರತೀಯರಿಂದಲೇ ನಿಧಿ ಎಂಬ ಹೊಸ ಮಾದರಿಯನ್ನು ಅವರು ರೂಪಿಸಿದ್ದರು. 2014ರಲ್ಲಿ ಹೊಸ ಆಡಳಿತ ಬಂದಾಗ ನಮಗೆ ಸಾಕಷ್ಟು ಸವಾಲುಗಳು ಎದುರಾದವು ಹಾಗೂ ನಮ್ಮ ಮೇಲೆ ನಿರಂತರ ನಿಗಾ ಇಡಲಾಗಿತ್ತು. ಆದರೆ, ಅನಂತ್ ಅವರು ನಮ್ಮ ಎಲ್ಲಾ ಕೆಲಸಗಳನ್ನು ಅತ್ಯಂತ ಪಾರದರ್ಶಕವಾಗಿಡುವ ಮೂಲಕ ನಮ್ಮ ವಿರುದ್ಧ ಯಾರೂ ಕ್ರಮ ಕೈಗೊಳ್ಳಲಾಗದಂತೆ ಮಾಡಿದ್ದರು. ನಾವು ಅತ್ಯುತ್ತಮ ಸ್ನೇಹಿತರಾಗಿದ್ದೆವು, ಆಗಾಗ ಕಾಫಿಗೆ ಭೇಟಿಯಾಗುತ್ತಿದ್ದೆವು ಹಾಗೂ ಸಂಗೀತದ ಬಗ್ಗೆ ಸಾಕಷ್ಟು ಚರ್ಚಿಸುತ್ತಿದ್ದೆವು. ನನಗಿಂತ ಕಿರಿಯರಾಗಿದ್ದ ಅವರ ಅಗಲಿಕೆ ಅತೀವ ನೋವು ತಂದಿದೆ.''

''ಅನಂತ್ ಅವರು ಆಮ್ನೆಸ್ಟಿ ಇಂಟರ್‌ನ್ಯಾಷನಲ್, ಗ್ರೀನ್‌ಪೀಸ್ ಹಾಗೂ ಅಜೀಂ ಪ್ರೇಮ್‌ಜಿ ಫಿಲಾಂತ್ರಪಿಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕೆಲಸ ಮಾಡಿದರೂ, ಯಾವತ್ತೂ ಮುನ್ನೆಲೆಗೆ ಬಾರದೆ ಎಲೆಮರೆ ಕಾಯಿಯಂತೆ ಕೆಲಸ ಮಾಡಿದರು. ಸುಸ್ಥಿರ ಕೃಷಿ ಹಾಗೂ ನೈಸರ್ಗಿಕ ಕೃಷಿಯ ಹಿಂದೆ ಅವರು ಮೆದುಳಾಗಿ ಕೆಲಸ ಮಾಡಿದ್ದರು ಎಂಬುದು ಅನೇಕರಿಗೆ ತಿಳಿದಿಲ್ಲ. ನಾನು ಅವರನ್ನು ಒಮ್ಮೆ ಮಾತ್ರ ಭೇಟಿಯಾಗಿದ್ದೆ, ಆದರೆ ಅವರ ಸಂಗಾತಿ ಕವಿತಾ ಕುರುಗಂಟಿ ಅವರ ಜೊತೆ ನನಗೆ ಹೆಚ್ಚು ಒಡನಾಟ ಇತ್ತು. ಅವರು ತೆರೆಯ ಹಿಂದೆ ನಿಂತು ಕೆಲಸ ಮಾಡಿದ್ದರಿಂದ ಬಹಳ ಜನಕ್ಕೆ ಅವರು ಗೊತ್ತಿಲ್ಲದಿರಬಹುದು. ಆದರೆ ಅಷ್ಟೇ ಗಾಂಭೀರ್ಯ, ಘನತೆ ಮತ್ತು ಬದ್ಧತೆಯಿಂದ ಕೆಲಸ ಮಾಡಿದ ಅಪರೂಪದ ವ್ಯಕ್ತಿ ಅವರು.''

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR